ಸ್ವಾಭಿಮಾನಿ ಸಹಕಾರಿ

Swabhimani Sahakari, Monthly, Posted at GPO-MBC Post Office 560001,
Posting Day 12th. Reg. No. RNP/BGS/2094/20011-13 Licence to post
RNI No.: KARBILO 2004/18001

## ಸಂಯುಕ್ತ ಸಹಕಾರಿಯ ನಿರ್ದೇಶಕರ ಪರಿಚಯ



# ಅಪಾರ ಅನುಭವ ಹಾಗೂ ಕರ್ತೃತ್ವ ಶಕ್ತಿಯ ಸಹಕಾರಿ



ಶ್ರೀ ಭಾಸ್ಕರ ಕಾಮತ

ಅವಿಭಾಜಿತ ದಕ್ಷಿಣ ಕನ್ನಡ ಜಿಲ್ಲೆ ಭಾರತ ದೇಶ ಇಡೀ ಪ್ರಪಂಚದಲ್ಲಿ ಹೆಸರು ಮಾಡಿರುವ ಜಿಲ್ಲೆ. ಸಾಂಸ್ಕೃತಿಕ ಸಾಹಿತ್ಯ ಸಂಗೀತ ಲಲಿತ ಕಲೆ, ಬ್ಯಾಂಕಿಂಗ್ ಹಾಗು ಹೋಟೆಲ್ ಉದ್ಯಮಗಳು ಇಲ್ಲಿಯ ಜನರಲ್ಲಿ ರಕ್ತಗತವಾಗಿ ಬಂದಿವೆ. ಅದರಂತೆ ಸಹಕಾರ ಕ್ಷೇತ್ರದಲ್ಲೂ ಕೂಡ ಇಲ್ಲಿಯ ಜನ ಸಾಕಷ್ಟು ಸಾಧನೆ ಮಾಡಿದ್ದಾರೆ. ಸಹಕಾರ ಇಲ್ಲಿಯ ಜನರಲ್ಲಿ ಮನೆಮಾತಾಗಿದೆ. ಪ್ರತಿಯೊಬ್ಬರು ಒಂದಿಲ್ಲೊಂದು ಸಹಕಾರ ಸಂಘಗಳಲ್ಲಿ ಸದಸ್ಯತ್ವವನ್ನು ಹೊಂದಿದವರಾಗಿದ್ದಾರೆ. ಸಹಕಾರ ಕ್ಷೇತ್ರದ ತವರೂರೆಂದು ಹೇಳಿದರೆ ತಪ್ಪಾಗಲಾರದು. ಈ ಸಹಕಾರಿ ಕ್ಷೇತ್ರದ ಅಗ್ರಗಣ್ಯ ನಾಯಕರುಗಳಾದ ದಿವಂಗತ ಮೊಳಹಳ್ಳಿ ಸದಾಶಿವರಾಯರು, ದಿವಂಗತ ಭಂಟ್ವಾಳ್ ನಾರಾಯಣ ನಾಯಕರು ಏರ್‍ಯ ಲಕ್ಷ್ಮಿನಾರಾಯಣ ಆಳ್ವ , ದಿವಂಗತ ಶ್ರೀ ಜಿ.ಎಸ್ ಆಚಾರ್ಯ ಮೊದಲಾದವರು ಈ ಜಿಲ್ಲೆಯ ಸಹಕಾರಿ ಕ್ಷೇತ್ರಕ್ಕೆ ಭದ್ರ ಬುನಾದಿ ಹಾಕಿದ್ದಾರೆ. ಅವಿಸ್ಮರಣೀಯರಾಗಿದ್ದಾರೆ. ಇವರ ದಾರಿಯಲ್ಲಿಯೇ ಇಂದಿನ ಸಹಕಾರಿಗಳು ಸಹಕಾರಿ ತತ್ವಗಳನ್ನ ರೂಢಿಸಿಕೊಂಡು ಕಾರ್ಯನಿರ್ವಹಿಸಿ ಸಹಕಾರಿ ಕ್ಷೇತ್ರದ ಕಾರ್ಯನಿರ್ವಹಣೆಯಲ್ಲಿ ಒಂದು ಮಾದರಿ ಜಿಲ್ಲೆಯನ್ನಾಗಿ ಮಾಡಿರುವುದು ಹೆಮ್ಮೆಯ ವಿಷಯ. ಆಡಳಿತಾತ್ಮಕ ದೃಷ್ಟಿಯಿಂದ ಈ ಜಿಲ್ಲೆ ಈಗ ದಕ್ಷಿಣ ಕನ್ನಡ ಹಾಗೂ ಉಡುಪಿ ಎಂದು ಎರಡು ಜಿಲ್ಲೆಗಳಾಗಿ ವಿಭಾಗವಾಗಿವೆ.

ಪ್ರಸ್ತುತ ಉಡುಪಿ ಜಿಲ್ಲೆಯಿಂದ ಸಂಯುಕ್ತ ಸಹಕಾರಿಯ ನಿರ್ದೇಶಕರಾಗಿ ಶ್ರೀ ಬೈಲೂರ್ ಭಾಸ್ಕರ್ ಕಾಮತ್ ಒಬ್ಬ ಪ್ರತಿಭಾಂತ ಅಪಾರ ಅನುಭವದ ಕರ್ತೃತ್ವ ಶಕ್ತಿಯ ಸಹಕಾರಿಯಾಗಿದ್ದಾರೆ.

ಶ್ರೀಯುತ ಕಾಮತರು ತಂದೆ ದೇವರಾಯ ಕಾಮತ್ ತಾಯಿ ಲಕ್ಷ್ಮೀಬಾಯಿ ಕಾಮತರ ಮುದ್ದಿನ ಮಗನಾಗಿ ದಿನಾಂಕ –10–9–1955ರಲ್ಲಿ ಉಡುಪಿಯ ಕಿನ್ನಿಮುಲ್ಕಿಯಲ್ಲಿ ಜನಿಸಿದರು. ಕುಟುಂಬದ ವೃತ್ತಿ ವ್ಯಾಪಾರ. ಶ್ರೀಯುತರು ಪ್ರಾಥಮಿಕ ಶಿಕ್ಷಣವನ್ನು ಉಡುಪಿಯ ವಿವೇಕಾನಂದ ಶಾಲೆ ಪ್ರೌಢ ಶಿಕ್ಷಣವನ್ನು ಕ್ರಿಶ್ಚಿಯನ್ ಹೈಸ್ಕೂಲ್‌ನಲ್ಲಿ ಪೂರೈಸಿ ಉಡುಪಿಯ ಪೂರ್ಣಪ್ರಜ್ಞ ಕಾಲೇಜ್‌ನಲ್ಲಿ ಬಿ.ಕಾಂ. ಪದವಿ ಪಡೆದ ನಂತರ ವೈಕುಂಠ ಬಾಳಿಗ ಲಾ–ಕಾಲೇಜ್ ಮುಖಾಂತರ ಕಾನೂನು ಪದವಿಯನ್ನು ಪಡೆದವರಾಗಿದ್ದಾರೆ. ಶ್ರೀಯುತರು ಪ್ರಾದೇಶಿಕ ಸಹಕಾರಿ ಆಡಳಿತ ಸಂಸ್ಥೆ ಬೆಂಗಳೂರು ಇಲ್ಲಿ ಡಿಪ್ಲೋಮ ಇನ್ ಇಂಡಸ್ಟ್ರಿಯಲ್ ಮ್ಯಾನೇಜ್‌ಮೆಂಟ್ ಪೂರೈಸಿ ಎರಡನೇ ರ್‍ಯಾಂಕ್ ಪಡೆದವರಾಗಿದ್ದಾರೆ.

ಶ್ರೀಯುತರು ಉಡುಪಿಯ ಪ್ರತಿಷ್ಠಿತ ಉಡುಪಿ ತಾಲ್ಲೂಕು ಇಂಡಸ್ಟ್ರೀಯಲ್ ಕೋ–ಆಪರೇಟಿವ್ ಸೊಸೈಟಿಯ ಪ್ರಧಾನ ವ್ಯವಸ್ಥಾಪಕರಾಗಿ ಕಳೆದ 33 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ಈ ಸಹಕಾರಿ ಸಂಸ್ಥೆಯು 10 ಶಾಖೆಗಳನ್ನು ಹಾಗೂ ಒಂದು ಮುದ್ರಣ ವಿಭಾಗವನ್ನು ಹೊಂದಿದೆ. ಈ ಸಹಕಾರಿಯಲ್ಲಿ 50 ಕೋಟಿ ರೂಪಾಯಿ ಠೇವಣಿ ಇದ್ದು ಪ್ರಸಕ್ತ ಸಾಲಿನಲ್ಲಿ 80 ಲಕ್ಷ ರೂಪಾಯಿಗಳ ಲಾಭವನ್ನು ಗಳಿಸಿದೆ.

ಶ್ರೀಯುತರು ಉಡುಪಿಯ ಗೃಹನಿರ್ಮಾಣ ಸಹಕಾರ ಸಂಘದ ನಿರ್ದೇಶಕರಾಗಿ, ಸುರಕ್ಷ ಸೌಹಾರ್ದ ಸಹಕಾರಿಯ ಸ್ಥಾಪಕರಾಗಿ, ಮುದ್ರಣ ಮಾಲೀಕರ ಸೌಹಾರ್ದ ಸಹಕಾರಿಯ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಶ್ರಿಯುತರು ಅವಿಭಾಜಿತ ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಯೂನಿಯನ್‌ನಲ್ಲಿ 1979ರಿಂದಲೂ ಎಲ್ಲಾ ಶಿಕ್ಷಣ ಹಾಗೂ ತರಬೇತಿ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸುತಾ ಬಂದಿದ್ದಾರೆ.

ಶ್ರೀಯುತರು ಸಾಮಾಜಿಕವಾಗಿ ಅನೇಕ ಸಂಘ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅವುಗಳಲ್ಲಿ ಪ್ರಮುಖವಾಗಿ ಉಡುಪಿ ಲಯನ್ಸ್ ಕ್ಲಬ್‌ನಲ್ಲಿ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದಾರೆ ಮುದ್ರಣ ಮಾಲಿಕರ ಅಸೋಸಿಯೇಷನ್‌ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದಾರೆ. ಕಿನ್ನಿಮುಲ್ಕಿ ಗಣೇಶೋತ್ಸವ ಸಲಹಾ ಸಮಿತಿ ಸದಸ್ಯರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಶ್ರೀಯುತರು ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಸಹಕಾರ ಕ್ಷೇತ್ರ ಇಂದು ಉತ್ತಮ ಸಾಧನವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಕ್ಷೇತ್ರ ಇನ್ನಷ್ಟು ಪ್ರಬಲವಾಗಿ ಬೆಳೆಯಬೇಕು ಇದಕ್ಕಾಗಿ ಸಹಕಾರಿಗಳೆಲ್ಲಾ ಒಗ್ಗಟ್ಟಾಗಿ ಕಾರ್ಯ ನಿರ್ವಹಿಸುವುದು ಅವಶ್ಯಕವೆಂದು ಅಭಿಪ್ರಾಯ ಪಡುತ್ತಾರೆ.

### ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಸಹಕಾರಿಯ ಸಂಪರ್ಕ ದೂರವಾಣಿಗಳು

| | | |
|---|---|---|
| ಅಧ್ಯಕ್ಷ | ಶ್ರೀ ಎಸ್. ಆರ್. ಸತೀಶಚಂದ್ರ | 9448696108 |
| ಉಪಾಧ್ಯಕ್ಷ | ಶ್ರೀ ಗುರುನಾಥ ಜ್ಯಾಂತಿಕರ | 9448270104 |
| ವ್ಯವಸ್ಥಾಪಕ ನಿರ್ದೇಶಕ | ಶ್ರೀ ಶರಣಗೌಡ ಜಿ. ಪಾಟೀಲ | 9740401685 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ನಾರಾಯಣ ಹೆಗಡೆ | 9480579882 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ವೈ. ಕುಮಾರ | 9845893455 |
| ತರಬೇತಿ ಅಧಿಕಾರಿ | ಶ್ರೀ ವಿ.ಜಿ. ಕಾರಕೂನ | 9482734077 |
| ಬೆಳಗಾವಿ ವಿಭಾಗಾಧಿಕಾರಿ | ಶ್ರೀ ಜಿ.ಎಸ್. ಚೋಪಣ್ಣನವರ್ | 9916367887 |
| ಗುಲ್ಬರ್ಗಾ ವಿಭಾಗಾಧಿಕಾರಿ | ಶ್ರೀ ಸಂಜಯ ಕೋರಟಕರ | 9900990268 |
| ಮೈಸೂರು ವಿಭಾಗಾಧಿಕಾರಿ | ಶ್ರೀ ಶಿವಕುಮಾರ ಬಿರಾದಾರ | 9844454995 |
| ಬೆಂಗಳೂರು ವಿಭಾಗಾಧಿಕಾರಿ | ಶ್ರೀ ರಘುನಂದನ್ ಕೆ. | 9481036592 |

ಬೆಳಗಾವಿ ವಿಭಾಗೀಯ ಕಛೇರಿಯ ವಿಳಾಸ : ನಂ.436, ಹುಯಿಲುಗೋಳ ಕಾಂಪ್ಲೆಕ್ಸ್, ಶೆರಿಗಲ್ಲಿ, ಬೆಳಗಾವಿ–1. ದೂ. 0831–2401551
ಗುಲ್ಬರ್ಗಾ ವಿಭಾಗೀಯ ಕಛೇರಿಯ ವಿಳಾಸ : ಡಿ.2, 1ನೇ ಮಹಡಿ, ರತಿ ಬಿಲ್ಡಿಂಗ್, ಖೂಬ ಪ್ಲಾಟ್, ಗುಲ್ಬರ್ಗಾ–2

ಇವರಿಂದ ಪ್ರಕಟಿತ :

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**

ನಿರ್ಮಾಣ ಭವನ ಆವರಣ, ಡಾ. ರಾಜಕುಮಾರ ರಸ್ತೆ,
(ವಿವೇಕಾನಂದ ಕಾಲೇಜು ಎದುರು)
ಒಂದನೇ ಬ್ಲಾಕ್ ರಾಜಾಜಿನಗರ. ಬೆಂಗಳೂರು – 560010.
web : www.souharda.coop, E-mail : souharada@souharada.coop
**ದೂರವಾಣಿ ಸಂಖ್ಯೆಗಳು :**
23378375/76/77/78/79/80 ಹಾಗೂ 23474408, 23573291

ಸಂಪಾದಕ, ಪ್ರಕಾಶಕ: **ಶರಣಗೌಡ ಜಿ. ಪಾಟೀಲ,**
ಸಂಚಿಕೆ ಸಿದ್ಧತೆ **ವಿ.ಜಿ.ಕಾರಕೂನ**
ಮುದ್ರಣ : ವರ್ಣ ಕಮ್ಯುನಿಕೇಷನ್ಸ್, ಬೆಂಗಳೂರು.

# ಸ್ವಾಭಿಮಾನಿ ಸಹಕಾರಿ

ದಶಮಾನೋತ್ಸವ ವರ್ಷ

ಸ್ವಾಯತ್ತತೆ,
ಸ್ವಯಂ ಆಡಳಿತ,
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಕ್ರಿಸ್‌ಮಸ್ ಹಬ್ಬದ ಶುಭಾಶಯಗಳು

ಸೌಹಾರ್ದ ಸಹಕಾರಿ ಚಳುವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸಂಪುಟ 9 * ಸಂಚಿಕೆ 11 * ಡಿಸೆಂಬರ್ 2011 * ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ * ವಾರ್ಷಿಕ ಚಂದಾ 50/– * ಬೆಲೆ ರೂ. 5/–




ತರಬೇತಿ ಕಾರ್ಯಕ್ರಮವನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲ ಸಚಿವ ಮಂಜುನಾಥ ಬೇವಿನಕಟ್ಟಿಯವರು ಉದ್ಘಾಟಿಸಿದರು. ಚಿತ್ರದಲ್ಲಿ ಶ್ರೀ ಭಾಸ್ಕರ ಹೆಗ್ಗಡೆ ಕಾಗೇರಿ, ಶ್ರೀ ಗುರುನಾಥಜ್ಯಾಂತೀಕರ, ಶ್ರೀ ಆನಂದ್ ಎಲ್.ಎಸ್., ಶ್ರೀ ವಿಶ್ವನಾಥ ಹಿರೇಮಠ ಹಾಗೂ ಶ್ರೀ ಶರಣಗೌಡ ಪಾಟೀಲ್ ಇದ್ದಾರೆ.

## ಹಂಪಿಯಲ್ಲಿ ಯಶಸ್ವಿಯಾಗಿ ಜರುಗಿದ ಸೌಹಾರ್ದ ಸಹಕಾರಿ ಸಿಬ್ಬಂದಿಗಳ 6ನೇ ತಂಡದ ತರಬೇತಿ ಕಾರ್ಯಕ್ರಮ

## 78ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಹಾರ್ದಿಕ ಶುಭಾಶಯಗಳು

ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿ.

ಒಳಪುಟಗಳಲ್ಲಿ...


ಅಧ್ಯಕ್ಷರ ನುಡಿ ..... 2
ಸೌಹಾರ್ದ ಸಹಕಾರಿಗಳ ಸಮಾಚಾರಗಳು ..... 3,4,5,6
ಸಹಕಾರಿ ಪ್ರಶಸ್ತಿ ..... 7
ಹಂಪಿ ತರಬೇತಿ ಕಾರ್ಯಾಗಾರ ..... 8,9
ಸಹಕಾರಿ ಪ್ರಶಸ್ತಿ ..... 10
ಲೇಖನಗಳು ..... 11,12,13,15
ಸಂಯುಕ್ತ ಸಹಕಾರಿ ಸಮಾಚಾರ ..... 14
ನಿರ್ದೇಶಕರ ಪರಿಚಯ ..... 16


ಸೌಹಾರ್ದ ಸಹಕಾರಿಗಳ ಸಂಖ್ಯೆ : 1841 - 'ಇ' ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ - 416



> ಭಾರತ ಪ್ರಪಂಚದಲ್ಲಿ ಬಲಿಷ್ಠ ರಾಷ್ಟ್ರವಾಗಿ ಬೆಳೆಯುತ್ತಿರುವ ಈ ಸುಸಂದರ್ಭದಲ್ಲಿ ಭಾರತದ ಸಹಕಾರ ಕ್ಷೇತ್ರದ ಬೆಳವಣಿಗೆಯ ಪಾಲು ಇನ್ನೂ ಹೆಚ್ಚಾಗಬೇಕು. ಸದ್ಯದ ಸಹಕಾರಿ ಕ್ಷೇತ್ರದ ಪಾಲು ಪ್ರಪಂಚದ ಗಮನವನ್ನೇ ಸೆಳೆದಿದೆಯಾದರೂ, ಇನ್ನೂ ಈ ಕ್ಷೇತ್ರದಲ್ಲಿ ಸಾಧಿಸಬೇಕಾದುದು ಸಾಕಷ್ಟಿದೆ. ಅಂತರ ರಾಷ್ಟ್ರೀಯಮಟ್ಟದಲ್ಲಿ ಸಹಕಾರ ಚಳುವಳಿಯ ಸಾಧನೆಯನ್ನು ಗಮನಿಸಿ 2012ನ್ನು "ಅಂತರರಾಷ್ಟ್ರೀಯ ಸಹಕಾರಿ ವರ್ಷ" ವನ್ನಾಗಿ ವಿಶ್ವಸಂಸ್ಥೆ ಘೋಷಿಸಿದೆ..

# ಬಲಿಷ್ಠ ಸಹಕಾರಿ ಸಮುದಾಯವಾಗಿ ಬೆಳೆಯುವುದು ಅಗತ್ಯ

58ನೇ ಅಖಿಲಭಾರತ ಸಹಕಾರ ಕ್ಷೇತ್ರ ಸಪ್ತಾಹದ ಆಚರಣೆ ಯಶಸ್ವಿಯಾಗಿದೆ. ದೇಶದಾದ್ಯಂತ ರಾಜಕಾರಣಿಗಳು ಸೇರಿದಂತೆ ಸಹಕಾರಿ ಗಣ್ಯರು, ಅಧಿಕಾರಿಗಳು ಈ ಸಪ್ತಾಹದ ಆಚರಣೆಯಲ್ಲಿ ಪಾಲ್ಗೊಂಡು ಸಹಕಾರಿ ಕ್ಷೇತ್ರದ ಸಾಧನೆಗಳನ್ನು ಮೆಲುಕು ಹಾಕಿ ಈ ಕ್ಷೇತ್ರ ಇನ್ನೂ ಬಲಿಷ್ಠವಾಗಿ ಬೆಳೆಯಲು ಕರೆಕೊಟ್ಟಿರುವುದು ಸ್ವಾಗತಾರ್ಹ. ಇದೊಂದು ಸಕಾರಾತ್ಮಕ ಬೆಳವಣಿಗೆ.

ಭಾರತ ಪ್ರಪಂಚದಲ್ಲಿ ಬಲಿಷ್ಠ ರಾಷ್ಟ್ರವಾಗಿ ಬೆಳೆಯುತ್ತಿರುವ ಈ ಸುಸಂದರ್ಭದಲ್ಲಿ ಭಾರತದ ಸಹಕಾರ ಕ್ಷೇತ್ರದ ಬೆಳವಣಿಗೆಯ ಪಾಲು ಇನ್ನೂ ಹೆಚ್ಚಾಗಬೇಕು. ಸದ್ಯದ ಸಹಕಾರಿ ಕ್ಷೇತ್ರದ ಪಾಲು ಪ್ರಪಂಚದ ಗಮನವನ್ನೇ ಸೆಳೆದಿದೆಯಾದರೂ, ಇನ್ನೂ ಈ ಕ್ಷೇತ್ರದಲ್ಲಿ ಸಾಧಿಸಬೇಕಾದುದು ಸಾಕಷ್ಟಿದೆ. ಅಂತರ ರಾಷ್ಟ್ರೀಯಮಟ್ಟದಲ್ಲಿ ಸಹಕಾರ ಚಳುವಳಿಯ ಸಾಧನೆಯನ್ನು ಗಮನಿಸಿ 2012ನ್ನು **"ಅಂತರರಾಷ್ಟ್ರೀಯ ಸಹಕಾರಿ ವರ್ಷ"**ವನ್ನಾಗಿ ವಿಶ್ವ ಸಂಸ್ಥೆ ಘೋಷಿಸಿದೆ. ಜಗತ್ತಿನಾದ್ಯಂತ 2012ನ್ನು ಸಹಕಾರಿ ವರ್ಷವನ್ನಾಗಿ ಆಚರಿಸಲು ಸಿದ್ಧತೆಗಳು ನಡೆಯುತ್ತಿರುವುದು ಸ್ವಾಗತಾರ್ಹ.

ಈ ಹಿನ್ನೆಲೆಯಲ್ಲಿ ನಮ್ಮ ದೇಶದ ಸಹಕಾರ ಚಳುವಳಿಯನ್ನು ಇನ್ನೂ ಹೆಚ್ಚಿಗೆ ಬಲಿಷ್ಠಗೊಳಿಸಲು ನಾವೆಲ್ಲ ಪ್ರಯತ್ನಿಸಬೇಕಿದೆ. ಈ ನಿಟ್ಟಿನಲ್ಲಿ ಸಹಕಾರ ಸಂಸ್ಥೆಗಳ ಸಂಖ್ಯೆಯಲ್ಲಿ ಹೆಚ್ಚಳವಾಗಬೇಕು. ಸಂಸ್ಥೆಗಳ ವ್ಯಾಪ್ತಿಯಲ್ಲಿ ಸದಸ್ಯರ ಸಂಖ್ಯೆ ಹೆಚ್ಚಳವಾಗಬೇಕು. ಸ್ವಾಭಾವಿಕ ಸಂಪನ್ಮೂಲಗಳ ಸದ್ಬಳಕೆಯಾಗಬೇಕು. ಸಂಸ್ಥೆಗಳ ಕಾರ್ಯಚಟುವಟಿಕೆಗಳೂ ಹೆಚ್ಚಾಗಬೇಕು. ಸದಸ್ಯರಿಗೆ ಅಗತ್ಯವೆನಿಸುವ ಎಲ್ಲ ಸೌಲಭ್ಯಗಳನ್ನು ಒದಗಿಸುವ ಉತ್ತಮ ಆರ್ಥಿಕ ಸಂಘಟನೆಗಳಾಗಿ ಕಾರ್ಯನಿರ್ವಹಿಸುವಂತಾಗಬೇಕು. ಸದಸ್ಯರಿಗೆ ಅವರ ಹುಟ್ಟಿನಿಂದ ಸಾಯುವವರೆಗಿನ ಎಲ್ಲ ಅಗತ್ಯಗಳನ್ನು ಪೂರೈಸುವ ಸಂಸ್ಥೆಗಳಾಗಿ ಬೆಳೆಯಬೇಕು. "ಆರ್ಥಿಕ ಸ್ವಾತಂತ್ರಕ್ಕೆ ಸಹಕಾರವೇ ಹೆಬ್ಬಾಗಿಲು" ಎಂದ ಮಹಾತ್ಮಾಗಾಂಧೀಜಿಯವರ ಕನಸು ನನಸಾಗಬೇಕು. ಈ ದೇಶದ ಸಹಕಾರ ಕ್ಷೇತ್ರವನ್ನು ಸಹಕಾರಿ ಕಾಮನ್‌ವೆಲ್ತ್ ರಾಷ್ಟ್ರವನ್ನಾಗಿಸುವ ರಾಷ್ಟ್ರದ ಪ್ರಥಮ ಪ್ರಧಾನಿ ದಿವಂಗತ ಜವಾಹರ್‌ಲಾಲ್ ನೆಹರೂರವರ ಕನಸು ನನಸಾಗಬೇಕು. ನಮ್ಮ ದೇಶದ ಸಹಕಾರ ಕ್ಷೇತ್ರವೊಂದು ಬೃಹತ್ "ಸಹಕಾರಿ ಸಮುದಾಯ"ವಾಗಿ ಕಾರ್ಯನಿರ್ವಹಿಸಲು **2012 ಸಹಕಾರಿ ವರ್ಷವನ್ನು ಯಶಸ್ವಿಯಾಗಿಸಲು ನಾವೆಲ್ಲ ಶ್ರಮಿಸುವುದು ಅಗತ್ಯ ಇಂದಿನಿಂದಲೇ ನಾವೆಲ್ಲ ಕಾರ್ಯೋನ್ಮುಖರಾಗೋಣ.** ನಮ್ಮ ದೇಶದ ಸಹಕಾರಿ ಕ್ಷೇತ್ರವನ್ನು "ಬಲಿಷ್ಠ ಸಹಕಾರಿ ಸಮುದಾಯದ ನಿರ್ಮಾಣದತ್ತ ಹೆಜ್ಜೆಹಾಕೋಣ". ರಾಷ್ಟ್ರದ ಆರ್ಥಿಕ ಅಭಿವೃದ್ಧಿಯಲ್ಲಿ ಸಹಕಾರ ಕ್ಷೇತ್ರಕ್ಕೆ ಮಹತ್ವದ ಸ್ಥಾನವನ್ನು ಒದಗಿಸೋಣ.

ಕರ್ನಾಟಕದ ಶ್ರೇಷ್ಠ ಕಾದಂಬರಿಕಾರರಾದ ಶ್ರೀ ಎಸ್.ಎಲ್. ಭೈರಪ್ಪನವರಿಗೆ 2010ರ ಪ್ರತಿಷ್ಠಿತ ಸರಸ್ವತಿಸಮ್ಮಾನ್ ಸಂದಿದೆ. ಇದು ಕನ್ನಡಿಗರಾದ ನಮ್ಮೆಲ್ಲರಿಗೂ ಅಪಾರ ಸಂತಸವನ್ನುಂಟುಮಾಡಿದೆ. ಹಾಗೆಯೇ ಉತ್ತರ ಕರ್ನಾಟಕ ಭಾಗದ ಗಂಗಾವತಿಯಲ್ಲಿ ನಡೆಯುತ್ತಿರುವ 78ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸಮಸ್ತ ಸಹಕಾರಿಗಳ ಪರವಾಗಿ ಹಾರ್ದಿಕ ಅಭಿನಂದನೆಗಳು

**ಎಸ್.ಆರ್. ಸತೀಶ್‌ಚಂದ್ರ**
ಅಧ್ಯಕ್ಷರು



# ಸಾಲ ಮತ್ತು ಮುಂಗಡಗಳನ್ನು ನೀಡುವ ವಿಧಾನಗಳು

ಸೌಹಾರ್ದ ಸಹಕಾರಿಗಳು ನೀಡುವ ಸಾಲಗಳ ಬಗ್ಗೆ ತಿಳುವಳಿಕೆ ನೀಡುವ ದೃಷ್ಟಿಯಿಂದ ಈ ಲೇಖನ ಪ್ರಕಟಿಸಲಾಗಿದೆ.

■ ಜಿ. ಎಸ್. ಟೋಪಣ್ಣವರ, ವಿಭಾಗೀಯ ಅಧಿಕಾರಿ, ಬೆಳಗಾವಿ.

(ಹಿಂದಿನ ಸಂಚಿಕೆಯಿಂದ)

**ಸಾಲಗಳ ವ್ಯವಹಾರದ ತತ್ವಗಳು:**

ಸಹಕಾರಿಯು ತನ್ನ ಹಣಕಾಸಿನ ವ್ಯವಹಾರಗಳನ್ನು ಉತ್ತಮವಾಗಿ ನಿರ್ವಹಿಸಲು ಈ ಕೆಳಗೆ ವಿವರಿಸಿದ ಸಾಲ ಕೊಡುವ ತತ್ವಗಳನ್ನು ಅನುಸರಿಸಬೇಕಾಗುತ್ತದೆ.

**1) ಸುರಕ್ಷತೆ** (Safety) :

* ಸಾಲಗಳನ್ನು ಉತ್ಪಾದಿಸಲಾಗಿ ಹಾಗೂ ನಿಯಮಿತವಾಗಿ ಉತ್ಪನ್ನ ಬರುವ ಉದ್ದೇಶಗಳಿಗೆ ಮಂಜೂರಿ ಮಾಡಿದಲ್ಲಿ ಸಾಲ ಮರುಪಾವತಿಯು ಸಾಧ್ಯ. (Not to sanction for unproductive & speculative purpose)

* ಪ್ರಾಮಾಣಿಕ, ವ್ಯವಹಾರಿಕ, ಅನುಭವಿಕ ಸದಸ್ಯನು ಉತ್ತಮ ಉತ್ಪನ್ನ ಗಳಿಸುವ ಸಾಮರ್ಥ್ಯವುಳ್ಳ ಸದಸ್ಯರಿಗೆ ಉತ್ತಮ ಉದ್ದೇಶಕ್ಕೆ ಸಾಲ ಪಡೆದಿದ್ದಲ್ಲಿ ವಸೂಲಿಯು ಸುರಳಿತವಾಗಿ ಆಗುತ್ತದೆ.





**2) ಫಲಶ್ರುತಿ** (Liquidity) :

* ಉತ್ತಮ ಹಾಗೂ ಉತ್ಪನ್ನ ಹೆಚ್ಚಿಸುವ ಉದ್ದೇಶಕ್ಕೆ ಸಾಲ ಕೊಟ್ಟಲ್ಲಿ ಸಾಲವು ಸಾಲದಲ್ಲಿಯ ಲಾಭವಾಗಿ ಸಾಲವು ಮರುಪಾವತಿಯಾಗುತ್ತದೆ.

* ಕಡಿಮೆ ಅವಧಿಯ ಸಾಲ ಬೇಡಿಕೆಗೆ ಸಾಲ ಕೊಟ್ಟಲ್ಲಿ ವಸೂಲಿಗೆ ಯಾವುದೇ ತೊಂದರೆಯಿಲ್ಲ.

* ನಿಧಿಗಳನ್ನು ಹೆಚ್ಚಿನ ಪ್ರಮಾಣದಲ್ಲಿ ನಿಶ್ಚಿತ ಆಸ್ತಿಗಳಲ್ಲಿ **(Fixed Assets)**ಗಳಲ್ಲಿ ವಿನಿಯೋಗಿಸದಿದ್ದಲ್ಲಿ ನಿಧಿಗಳ ವಹಿವಾಟಕ್ಕೆ ತೊಂದರೆ ಆಗಲಾರದು.

**3) ಉದ್ದೇಶಗಳು** (Purpose):

* ಉತ್ಪನ್ನಗಳನ್ನು ಬೆಳೆಸುವ ಹಾಗೂ ಹೆಚ್ಚಿಗೆ ವಹಿವಾಟು ಇರುವ ಔದ್ಯಮಿಕ ಚಟುವಟಿಕೆಗಳಿಗೆ ಅವುಗಳ ಬೆಳವಣಿಗೆಯ ಉದ್ದೇಶಕ್ಕಾಗಿ ಹಾಗೂ ಉತ್ಪಾದನೆಗಳನ್ನು ಹೆಚ್ಚಿಸುವ ಸಲುವಾಗಿ ಸಾಲಗಳ ಮಂಜೂರಿ ಆಗಬೇಕು.

ಹೀಗಾದರೆ ಸಾಲದ ವಿನಿಯೋಗ ಉತ್ತಮ ರೀತಿಯಿಂದ ಸಾಲಗಾರರು ಮಾಡಿಕೊಂಡು ಸಾಲ ತುಂಬಲು ಅವರಿಗೆ ಅನುಕೂಲವಾಗುತ್ತದೆ. **(Economically viable and feasible with production oriented units)**

* ಸಾಲಗಳನ್ನು ಮದುವೆ, ಪ್ರವಾಸ, ಹಿಂದಿನ ಸಾಲಗಳ ಮರುಪಾವತಿಗಾಗಿ ಮಂಜೂರು ಮಾಡಬಾರದು.

**4) ಲಾಭದಾಯಕ (Profitability) :**

* ಉತ್ತಮ ಭವಿಷ್ಯವಿರುವ ಸಾಲದ ಪ್ರಸ್ತಾವನೆಯನ್ನು ಮಮಜೂರು ಮಾಡಿದಲ್ಲಿ ಅದು ನಿಶ್ಚಿತವಾಗಿ ಲಾಭ ಗಳಿಸುವಲ್ಲಿ ಯಾವುದೇ ಸಂಶಯವಿರುವುದಿಲ್ಲ. ಅಂತಹ ಪ್ರಸ್ತಾವನೆಗಳಿಗೆ ಉತ್ತೇಜನ ಕೊಡಬೇಕು.

* ನಿಧಿಗಳ ಬಳಕೆಯಲ್ಲಿ ನಿಧಿಗಳ ವೆಚ್ಚಗಳನ್ನು ಪರಿಕ್ಷೀಸಬೇಕು ಹಾಗೂ ಆಪರೇಷನ್ ಖರ್ಚುಗಳನ್ನು ಪರಿಶೀಲಿಸಿ ಹೆಚ್ಚಿಗೆ ಲಾಭವಾಗುವ ಪ್ರಸ್ತಾವನೆಗಳಲ್ಲಿ ಸಾಲ ಮಂಜೂರು ಮಾಡಬೇಕು.

* ಸಹಕಾರಿಯು ಸಾಲ ಕೊಡುವಾಗ ಸಾಲ ಪಡೆಯುವ ವ್ಯಕ್ತಿಯ ವ್ಯವಹಾರಿಕ ವೆಚ್ಚಗಳು, ಸವಕಳಿಗಳು ತೆಗೆದಿರಿಸಿ ಪ್ರಸ್ತಾವಣೆಯು ಲಾಭದಾಯಕವಾಗಿರಬೇಕು.

5) ಭದ್ರತೆ **(Security):**


* ಸುರಕ್ಷತೆ ಮೊದಲು ಆಮೇಲೆ ಭದ್ರತೆ ಎಂದು ಹೇಳಲಾಗುತ್ತದೆ. ಸುರಕ್ಷತೆಯನ್ನು ಬದಿಗೊತ್ತಿ ಭದ್ರತೆಗೆ ಬೆಲೆ ಕೊಟ್ಟರೆ ಭದ್ರತೆಯಿಂದ ಹಣ ವಸೂಲಿ ಮಾಡಲು ವರ್ಷಗಟ್ಟಲೇ ಕಾಯಬೇಕು. ಆದರೂ ಭದ್ರತೆ ಇಲ್ಲದೇ ಯಾವ ಸಾಲವನ್ನು ಕೊಡುವಲಾಗುವುದಿಲ್ಲ. ಸಾಲ ಸುಸ್ಥಿ ಬಾಕಿಯಾದಲ್ಲಿ ಸಾಲ ವಸೂಲಿಯಲ್ಲಿ ಭದ್ರತೆ ಮಾತ್ರ ಸಹಯಕಾರಿಯಾಗುತ್ತದೆ.

* ಉತ್ತದ ಚರಿತ್ರೆಯ ಹಾಗೂ ಸಾಲ ತುಂಬುವ ಸಾಮರ್ಥ್ಯವುಳ್ಳ ಸದಸ್ಯರಿಗೆ ಸಾಲ ಕೊಟ್ಟಲ್ಲಿ ಸಾಲ ವಸೂಲಿಗೆ ಯಾವುದೇ ತೊಂದರೆಯಾಗದೆ ಸಹಕಾರಿಯು ಕಾರ್ಯನಿರ್ವಹಿಸಬಹುದಾಗಿದೆ.

* ಭದ್ರತೆಯು ಬೆಲೆಯುಳ್ಳದ್ದು, ವರ್ಗಾವಣೆಗೆ ಅರ್ಹವಾದದ್ದು, ನಿಶ್ಚಿತವಾಗಿ ಬೇಡಿಕೆಯುಳ್ಳದ್ದು ಯಾವುದೇ ಬೋಜಾ ರಹಿತವಾದದ್ದು ಸ್ಥಿರವಾದದ್ದು ಇದ್ದಲ್ಲಿ ಸಾಲ ವಸೂಲಿಗೆ ಸಹಕಾರಿಗೆ ತೊಂದರೆಯಾಗುವುದಿಲ್ಲ.

* ಯಾವುದೇ ಕಾರಣಕ್ಕೆ ಸಾಲಗಳು ಸುಸ್ಥಿಯಾದಲ್ಲಿ ನಿಶ್ಚಿತ ರೂಪದ ಉತ್ತಮ ಭದ್ರತೆಯು ಸಹಕಾರಿಗೆ ಬರೆದು ಕೊಟ್ಟಿದ್ದಲ್ಲಿ ಅದರ ಮಾರಾಟದಿಂದ ಸಾಲ ಬಾಕಿಗಳನ್ನು ವಸೂಲು ಮಾಡಲು ಶಕ್ಯವಾಗುವುದು. ಹೀಗಾಗಿ ಭದ್ರತೆಯನ್ನು ಅಲ್ಲಗಳೆಯಲಾಗುವುದಿಲ್ಲ. ■

## ಅರಿಹಂತ ಅರ್ಬನ್ ಸೌಹಾರ್ದ ಕ್ರೆಡಿಟ್ ಸಹಕಾರಿ ನೂತನ ಅಧ್ಯಕ್ಷ-ಉಪಾಧ್ಯಕ್ಷರ ಆಯ್ಕೆ



ಶ್ರೀ ಪದ್ಮನಾಭ ರಾ.ಚೇಗಲಾ
ಅಧ್ಯಕ್ಷರು

**ಹುಲ್ಲೋಳಿ:** ಅರಿಹಂತ ಅರ್ಬನ್ ಸೌಹಾರ್ದ ಕ್ರೆಡಿಟ್ ಸಹಕಾರಿ ಹುಲ್ಲೋಳಿಯಲ್ಲಿ ದಿನಾಂಕ:06/11/2011ರಂದು ಆಡಳಿತ ಮಂಡಳಿಯ ಸಭೆಯಲ್ಲಿ ಶ್ರೀ ಪದ್ಮನಾಭ ರಾಮಪ್ಪ ಚೇಗಲಾ(ವಕೀಲರು) ಇವರು ಅಧ್ಯಕ್ಷರಾಗಿ ಹಾಗೂ ಶ್ರೀಜಯಪಾಲ ಪಾರೇಸ ಚೇಗಲಾ ಇವರು ಉಪಾಧ್ಯಕ್ಷರಾಗಿ 30ತಿಂಗಳುಗಳ ಅವಧಿಗೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.



ಶ್ರೀ ಜಯಪಾಲ ಪಾ.ಚೇಗಲಾ
ಉಪಾಧ್ಯಕ್ಷರು

# ಚಿಕ್ಕಮಗಳೂರು ಹಾಗೂ ಶಿರಸಿಯಲ್ಲಿ ಅವಲೋಕನಾ ಸಭೆಗಳು

ದಿನಾಂಕ: 3/11/2011ರಂದು ಚಿಕ್ಕಮಗಳೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅವಲೋಕನಾ ಸಭೆಯನ್ನು ಕೊಪ್ಪದಲ್ಲಿ ಹಾಗೂ ಉತ್ತರ ಕನ್ನಡ ಜಿಲ್ಲೆಯ ಘಟ್ಟದಮೇಲಿನ ತಾಲ್ಲೂಕುಗಳ ಸೌಹಾರ್ದ ಸಹಕಾರಿಗಳ ವಾರ್ಷಿಕ ಅವಲೋಕನಾ ಸಭೆಯು ದಿನಾಂಕ 13/11/2011 ರಂದು ಶಿರಸಿಯ ಕದಂಬ ಕ್ರೆಡಿಟ್ ಸೌಹಾರ್ದ ಸಹಕಾರಿಯ ಸಭಾಂಗಣದಲ್ಲಿ ನಡೆಯಿತು.

ಸೌಹಾರ್ದ ಸಹಕಾರಿಗಳ ಅಭಿವೃದ್ಧಿ ಹಾಗೂ ಕಾರ್ಯ ಚಟುವಟಿಕೆಗಳನ್ನು ಪರಿಶೀಲಿಸಲಾಯಿತು. ಈ ಎರಡು ಅವಲೋಕನಾ ಸಭೆಗಳ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀಎಸ್.ಆರ್.ಸತೀಶ್‌ಚಂದ್ರರವರು ವಹಿಸಿದ್ದರು. ಕೊಪ್ಪದಲ್ಲಿ ನಡೆದ ಸಭೆಯಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಜಿ.ಎಸ್. ಮಹಾಬಲರವರು ಹಾಗೂ ಶಿರಸಿಯಲ್ಲಿ ನಡೆದ ಸಭೆಯಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಭಾಸ್ಕರ್‌ಹೆಗಡೆ ಕಾಗೇರಿಯವರು ಭಾಗವಹಿಸಿದ್ದರು.

ಚಿಕ್ಕಮಗಳೂರು ಜಿಲ್ಲೆಯ 7 ಸಹಕಾರಿಗಳ 15 ಪ್ರತಿನಿಧಿಗಳು ಶಿರಸಿಯಲ್ಲಿ 13 ಸಹಕಾರಿಗಳ 30 ಪ್ರತಿನಿಧಿಗಳು ಭಾಗವಹಿಸಿದ್ದರು.





## ನೂತನ ಶಾಖೆಯ ಪ್ರಾರಂಭೋತ್ಸವ



ಶೃತಿ ಸೌಹಾರ್ದ ಪತ್ತಿನ ಸಹಕಾರಿ ನಿ., ಬೆಂಗಳೂರಿನ ಹೊಸ ಶಾಖೆಯ ಪ್ರಾರಂಭೋತ್ಸವನ್ನು ಶುಶೃತಿ ಗ್ರೂಫ್ ಆಪ್ ಇನ್ಸ್ಟಿಟ್ಯೂಶನ್ಸ್ ಅಧ್ಯಕ್ಷ ಶ್ರೀ ಎನ್. ಶ್ರೀನಿವಾಸ್ ಮೂರ್ತಿ ಉದ್ಘಾಟಿಸಿದರು. ಶೃತಿ ಸೌಹಾರ್ದ ಪತ್ತಿನ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ.ಪುರುಷೋತ್ತಮ್ ಹಾಗೂ ಉಪಾಧ್ಯಕ್ಷರಾದ ಶ್ರೀ.ಡಾ|| ವೈ. ಆರ್. ಸದಾಶಿವಯ್ಯ ಮತ್ತು ಇತರ ಸಹಕಾರಿಗಳು ಭಾಗವಹಿಸಿದ್ದರು.

## ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

'ನಿರ್ಮಾಣ ಭವನ', ಡಾ.ರಾಜ್‌ಕುಮಾರ್ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-10. ದೂರವಾಣಿ:080-23378375-80, ಇ-ಮೇಲ್:souharda@souharda.coop

ಸಂಖ್ಯೆ: ಸಂಸ/ಚುನಾ/2012

### ಸುತ್ತೋಲೆ

7 ಡಿಸೆಂಬರ್ 2011

ಮಾನ್ಯರೇ,

ಸಹಕಾರಿಯ ಆಡಳಿತ ಮಂಡಳಿಯ ಚುನಾವಣೆಗೆ ಸಂಬಂಧಿಸಿದಂತೆ ಈ ಕೆಳಗಿನ ಸಂಗತಿಗಳನ್ನು ಗಮನಿಸಿ ಕೂಡಲೇ ಕಾರ್ಯಪ್ರವೃತ್ತರಾಗಲು ಈ ಮೂಲಕ ಸೂಚಿಸಲಾಗಿದೆ.

1, ಏಪ್ರಿಲ್ 2007ರಿಂದ 31 ಮಾರ್ಚ್ 2008ರ ನಡುವೆ ಯಾವುದೇ ಸಮಯದಲ್ಲಿ ಆಡಳಿತ ಮಂಡಳಿ ಅಧಿಕಾರ ವಹಿಸಕೊಂಡ ಸಹಕಾರಿಗಳ ಚುನಾವಣೆಯು 31 ಮಾರ್ಚ್ 2012ರೊಳಗೆ ನಡೆದು ಹೊಸ ಆಡಳಿತ ಮಂಡಳಿಯು 1 ಏಪ್ರಿಲ್ 2012ರಂದು ಅಧಿಕಾರ ವಹಿಸಿಕೊಳ್ಳಬೇಕಾಗುತ್ತದೆ.

ಗಮನಿಸಿ: ಕಾಯ್ದೆ ಕಲಂ24(2)ರಂತೆ ಆಡಳಿತ ಮಂಡಳಿಯ ಅವಧಿಯು ಐದು ವರ್ಷಗಳಾಗಿರುತ್ತದೆ. ಯಾವುದೇಸಹಕಾರಿ ವರ್ಷದ ಮಧ್ಯಭಾಗದಲ್ಲಿ ಚುನಾವಣೆ ನಡೆದರೆ, ಉಳಿದ ಅವಧಿಯನ್ನು ಪೂರ್ಣ ವರ್ಷವೆಂದು ಭಾವಿಸಬೇಕಾಗುತ್ತದೆ. ಅಂದರೆ, 1 ಏಪ್ರಿಲ್ 2007 ರಿಂದ 31ಮಾರ್ಚ್ 2008ರ ನಡುವೆ ಯಾವುದೇ ಸಮಯದಲ್ಲಿ ಆಡಳಿತ ಮಂಡಳಿಯು ಅಧಿಕಾರ ವಹಿಸಿಕೊಂಡಿದ್ದರೆ, 31ಮಾರ್ಚ್ 2008ಕ್ಕೆ ಒಂದುವರ್ಷ ಪೂರ್ಣಗೊಂಡಿದೆ ಎಂದು ಪರಿಗಣಿಸಬೇಕು. ಈಗಾಗಲೇ ವಿವರವಾದ ಸುತ್ತೋಲೆಯನ್ನು ಮೇಲೆ ತಿಳಿಸಿದ ಅವಧಿಯಲ್ಲಿ ಅಧಿಕಾರ ವಹಿಸಿಕೊಂಡ ಸಹಕಾರಿಗಳಿಗೆ ಕಳುಹಿಸಿಕೊಡಲಾಗಿದೆ. ಇನ್ನೂ ವಿವರವಾದ ಸುತ್ತೋಲೆಗಾಗಿ ಮತ್ತು ಹೆಚ್ಚಿನ ಮಾಹಿತಿಗಾಗಿ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು. ಇಲ್ಲಿಗೆ ಸಂಪರ್ಕಿಸಿ

ಸಹಿ/-
**(ಶರಣಗೌಡ ಜಿ. ಪಾಟೀಲ್)**
ವ್ಯವಸ್ಥಾಪಕ ನಿರ್ದೇಶಕರು

# ಸಹಕಾರಿ ಧ್ವಜಾರೋಹಣದೊಂದಿಗೆ ವಿಕಾಸ ಬ್ಯಾಂಕ್‌ನಲ್ಲಿ 58ನೇ ಅಖಿಲ ಭಾರತ ಸಹಕಾರಿ ಸಪ್ತಾಹಕ್ಕೆ ಚಾಲನೆ



"58ನೇ ಅಖಿಲ ಭಾರತ ಸಹಕಾರಿ ಸಪ್ತಾಹ"ದ ಅಂಗವಾಗಿ ಸ್ಥಳೀಯ ವಿಕಾಸ ಬ್ಯಾಂಕ್‌ನಲ್ಲಿ ಆಯೋಜಿಸಿದ್ದ ಧ್ವಜಾರೋಹಣ ಕಾರ್ಯಕ್ರಮ.

**ಹೊಸಪೇಟೆ :** ಸಾಮಾನ್ಯರಿಗೂ ಆರ್ಥಿಕ ಮತ್ತು ಸಾಮಾಜಿಕ ನೆರವು ನೀಡುವ ಮೂಲಕ ಸಹಕಾರಿ ಸಂಸ್ಥೆಗಳು ತಮ್ಮ ಮೂಲ ಆಶಯಕ್ಕೆ ಸ್ಪಂದಿಸಲೇಬೇಕಾದ ಅನಿವಾರ್ಯತೆ ಇದೆ ಎಂದು ವಿಕಾಸ ಸೌಹಾರ್ದ ಕೋ–ಆಪರೇಟಿವ್ ಬ್ಯಾಂಕ್‌ನ ಅಧ್ಯಕ್ಷ ಶ್ರೀ ವಿಶ್ವನಾಥ ಚ. ಹಿರೇಮಠ ತಿಳಿಸಿದರು.

ಸೋಮವಾರ ಸ್ಥಳೀಯ ವಿಕಾಸ ಬ್ಯಾಂಕ್‌ನಲ್ಲಿ "58ನೇ ಅಖಿಲ ಭಾರತ ಸಹಕಾರಿ ಸಪ್ತಾಹ"ದ ಅಂಗವಾಗಿ ಆಯೋಜಿಸಿದ್ದ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ತಾಂತ್ರಿಕತೆಯಲ್ಲಿ ಎಷ್ಟೇ ಪ್ರಗತಿ ಸಾಧಿಸಿದ್ದರೂ ಗ್ರಾಮಾಂತರ ಪ್ರದೇಶ ಸೇರಿದಂತೆ ಸಮಾಜದ ಕೆಳ ಹಂತದ ಸಾಮಾನ್ಯರ ಅವಶ್ಯಕತೆಗಳನ್ನು ಪೂರೈಸಲು ಸಹಕಾರಿ ಸಂಸ್ಥೆಗಳಿಂದ ಮಾತ್ರ ಸಾಧ್ಯ, ಈ ಹಿನ್ನೆಲೆಯಲ್ಲಿ ಸಹಕಾರಿ ಸಂಸ್ಥೆಗಳು ವೈಜ್ಞಾನಿಕ ಬೆಳವಣಿಗೆಯ ಜೊತೆಗೆ ತಮ್ಮ ಕಾರ್ಯವೈಖರಿಯ ಮನೋಭಾವನೆ ಬದಲಾಯಿಸಿಕೊಂಡು, ಉತ್ತಮ ಗ್ರಾಹಕ ಸೇವೆ ನೀಡುವ ಮೂಲಕ ಆಂದೋಲನ ಗಟ್ಟಿಗೊಳಿಸಬೇಕು. ಈ ಸಪ್ತಾಹದ ಧ್ಯೇಯವಾದ "ಸಹಕಾರಿ ಸಂಘಗಳ ಮೂಲಕ ಸರ್ವಾಂಗೀಣ ಅಭಿವೃದ್ಧಿ"ಯಂತೆ ಸಮಾಜದ ಸರ್ವಾಂಗೀಣ ಅಭಿವೃದ್ಧಿಗೆ ಬದ್ಧರಾಗಿ ಕಾರ್ಯನಿರ್ವಹಿಸಬೇಕು ಎಂದರು.

ನಿರ್ದೇಶಕ ಶ್ರೀ ಅನಂತ ಜೋಶಿ ಸಪ್ತವರ್ಣದ ಧ್ವಜಾರೋಹಣದೊಂದಿಗೆ ಸಹಕಾರಿ ಸಪ್ತಾಹಕ್ಕೆ ಚಾಲನೆ ನೀಡಿ, ಸಪ್ತಾಹದ 7 ದಿನವೂ ಗ್ರಾಹಕರೊಂದಿಗೆ ಮುಕ್ತವಾಗಿ ವಿಚಾರ ವಿನಿಮಯ ಮಾಡುವ ಮೂಲಕ ಸಹಕಾರಿ ಆಂದೋಲನದ ಮಹತ್ವ ತಿಳಿಸುವ ಮೂಲಕ ಜನರಲ್ಲಿ ಜಾಗೃತಿ ಮೂಡಿಸಬೇಕು ಎಂದರು.

ನಿರ್ದೇಶಕರಾದ ಶ್ರೀ ಎಂ.ವೆಂಕಪ್ಪ, ಶ್ರೀ ರಮೇಶ ಪುರೋಹಿತ್, ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಶ್ರೀಮತಿ ಇ. ಉಮಾದೇವಿ, ವ್ಯವಸ್ಥಾಪಕರಾದ ಶ್ರೀ ಶಿವಶಂಕರರಾವ್, ಶ್ರೀ ಪ್ರವೀಣ ಶಹಪೂರ, ಮಧುಶ್ರೀ, ಮಮತಾ ಸೇರಿದಂತೆ ಬ್ಯಾಂಕಿನ ಎಲ್ಲ ಸಿಬ್ಬಂದಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಗ್ರಾಹಕ ಸಂಪರ್ಕ ಸಭೆ, ಸಹಕಾರಿಗಳಲ್ಲಿ ವ್ಯವಹರಿಸುವುದರಿಂದ ಆಗುವ ಲಾಭಗಳು, ಹಿರಿಯ ನಾಗರಿಕರೊಂದಿಗೆ ಸಂವಾದ, ಠೇವಣಿದಾರರ ಸಂಪರ್ಕ ಕಾರ್ಯಕ್ರಮಗಳು ಸೇರಿದಂತೆ ಇತರೆ ವೈವಿಧ್ಯಮಯ ಕಾರ್ಯಕ್ರಮಗಳನ್ನು ಈ ಸಂದರ್ಭದಲ್ಲಿ ಆಯೋಜಿಸಿರುವುದಾಗಿ ಇ.ಉಮಾದೇವಿ ತಿಳಿಸಿದ್ದಾರೆ.

**ಕೃತಿಕಾ ಸಹಕಾರಿ:** ನಗರದ ಮುಖ್ಯ ರಸ್ತೆಯ ಕೃತಿಕಾ ಪತ್ತಿನ ಸೌಹಾರ್ದ ಸಹಕಾರಿಯಲ್ಲಿ 58ನೇ ಅಖಿಲ ಭಾರತ ಸಹಕಾರಿ ಸಪ್ತಾಹವನ್ನು ಸಹಕಾರಿಯ ನಿರ್ದೇಶಕ ಗುರುರಾಜ ದೇಶಪಾಂಡೆ ಧ್ವಜಾರೋಹಣದೊಂದಿಗೆ ನೆರವೇರಿಸಿದರು.

ಸಹಕಾರಿಯ ನಿರ್ದೇಶಕರು, ಗ್ರಾಹಕರು ಮತ್ತು ಸಿಬ್ಬಂದಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಗುರುಬಸವೇಶ್ವರ ಸೌಹಾರ್ದ ವಿವಿದೋದ್ದೇಶ ಸೌಹಾರ್ದ ಸಹಕಾರಿಯ ಅಧ್ಯಕ್ಷೆ ಶ್ರೀಮತಿ ರೇಣುಕಾ ಬಸವರಾಜ ಧ್ವಜಾರೋಹಣದೊಂದಿಗೆ ಸಪ್ತಾಹಕ್ಕೆ ಚಾಲನೆ ನೀಡಿದರು. ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಗ್ರಾಹಕರು ಹಾಜರಿದ್ದರು.

# ಬೆಳ್ತಂಗಡಿಯಲ್ಲಿ ಸರಸ್ವತಿ ಸಹಕಾರಿಯ 8ನೇ ಶಾಖೆ ಉದ್ಘಾಟನೆ

**ಜೀವನದಲ್ಲಿ** ಸಂಪತ್ತು ಶಾಶ್ವತವಲ್ಲ. ಧರ್ಮದ ವ್ಯವಹಾರಕ್ಕೆ ಭಗವಂತನ ಆಶೀರ್ವಾದ ಸದಾ ಇರುತ್ತದೆ. ಧರ್ಮ, ಅರ್ಥ, ಕಾಮ, ಮೋಕ್ಷಗಳು ಪುರುಷಾರ್ಥಗಳಾಗಿದ್ದು ಅರ್ಥ ಸಂಪಾದನೆ ಕೂಡ ಧಾರ್ಮಿಕ ಮಾರ್ಗದಲ್ಲಿರಬೇಕು ಎಂದು ಗೋವಾದ ಪೊಂಡಾ ಶ್ರೀ ಸಂಸ್ಥಾನ ಗೌಡ ಪಾದಾಚಾರ್ಯ ಮಠದ ಶ್ರೀ ಶಿವಾನಂದ ಸರಸ್ವತಿ ಸ್ವಾಮೀಜಿ ನುಡಿದರು. ಅವರು ದಿನಾಂಕ 28–11–2011 ಸೋಮವಾರ ಬೆಳ್ತಂಗಡಿಯ ಮೂರು ಮಾರ್ಗದ ವಿವಾ ಕಾಂಪ್ಲೆಕ್ಸ್‌ನಲ್ಲಿ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತದ ಎಂಟನೇ ಶಾಖೆಯನ್ನು ಉದ್ಘಾಟಿಸಿ ಆಶೀರ್ವಚನ ನೀಡಿದರು.

ಜಿ.ಪಂ ಅಧ್ಯಕ್ಷೆ ಶ್ರೀಮತಿ ಕೆ.ಟಿ.ಶೈಲಜಾ ಭಟ್ ಮಾತನಾಡಿ, ಸಹಕಾರ ಸಂಘದ ಮೂಲಕ ಜಿಲ್ಲೆ ಅಭಿವೃದ್ಧಿ ಸಾಧಿಸಿದೆ. ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಸಹಕಾರಿ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳಬೇಕು ಎಂದರು. ಸಂಸ್ಕಾರ ಭಾರತಿ ಅಧ್ಯಕ್ಷರಾದ ಶ್ರೀ ರಮಾನಂದ ಸಾಲಿಯಾನ್ ಅಧ್ಯಕ್ಷತೆ ವಹಿಸಿದ್ದರು.

ಬೆಳ್ತಂಗಡಿ ಶಾಸಕರಾದ ಶ್ರೀ ಕೆ. ವಸಂತ ಬಂಗೇರ, ನ್ಯಾಯವಾದಿ ಶ್ರೀ ಪ್ರತಾಪಸಿಂಹ ನಾಯಕ್, ಗೌಡರ ಯಾನೆ ಒಕ್ಕಲಿಗರ ಸಂಘದ ಅಧ್ಯಕ್ಷ ಶ್ರೀ ಕುಶಾಲಪ್ಪ ಗೌಡ ಪೂವಾಜೆ, ಸಹಕಾರ ಭಾರತಿ ದಕ್ಷಿಣ ಪ್ರಾಂತ ಸಂಚಾಲಕ ಪ್ರಸನ್ನ ಕೆ. ಮುಖ್ಯ ಅತಿಥಿಗಳಾಗಿದ್ದರು.




ನಿರ್ದೇಶಕರಾದ ಶ್ರೀ ಪದ್ಮನಾಭ ಬೋರ್ಕರ್, ಶ್ರೀ ಎಂ.ಸುನಿಲ್‌ಬೋರ್ಕರ್, ಶ್ರೀ ಎನ್ ರಮೇಶ್ ಪ್ರಭು, ಶ್ರೀ ಎಂ.ಅನಂತಕೃಷ್ಣ ನಾಯಕ್, ಶ್ರೀ ಸೂರ್ಯ ನಾರಾಯಣ ನಾಯಕ್, ಶ್ರೀ ದೇವಿಪ್ರಸಾದ್ ಕಲ್ಲಾಜೆ, ಶ್ರೀ ಪ್ರಭಾಕರ ನಾಯಕ್, ಶಾಖಾ ವ್ಯವಸ್ಥಾಪಕ ಶ್ರೀ ವಿನಯಚಂದ್ರ ಎನ್. ಉಪಸ್ಥಿತರಿದ್ದರು.

ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ವಿನಯ ಕುಮಾರ್ ಕಂದಡ್ಕ ಸ್ವಾಗತಿಸಿ, ಭವಾನಿ ಪ್ರಭು, ಪ್ರೇಮಚಂದ್ರ ನಾಯಕ್ ಕಾರ್ಯಕ್ರಮ ನಿರ್ವಹಿಸಿದರು. ಪ್ರಧಾನ ಸಂಚಾಲಕ ವಸಂತ ವಂದಿಸಿದರು.

### ಕರ್ನಾಟಕ ಸೌಹಾರ್ದ ಸಂಯುಕ್ತ ಸಹಕಾರಿ ವತಿಯಿಂದ ಆರ್‌ಐಸಿಎಂನಲ್ಲಿ

# ಸಂಯುಕ್ತ ಸಹಕಾರಿಯ ನೂತನ ಸಿಬ್ಬಂದಿಗಳಿಗೆ ತರಬೇತಿ ಕಾರ್ಯಕ್ರಮ





ಚಿತ್ರದಲ್ಲಿ ಎಡದಿಂದ-ಸಂಯುಕ್ತ ಸಹಕಾರಿಯ ಡಿಜಿಎಂ ಶ್ರೀ ವೈ.ಕುಮಾರ್, ನಿರ್ದೇಶಕರಾದ ಶ್ರೀ ಭಾಸ್ಕರ್ ಹೆಗಡೆ, ವಕೀಲರಾದ ಶ್ರೀಅನೂಪ್ ದೇಶಪಾಂಡೆ, ಆರ್‌ಐಸಿಎಂನ ನಿರ್ದೇಶಕರಾದ ಶ್ರೀ ಎಸ್.ಎ. ಸಿದ್ಧಾಂತಿ ಸಂಯುಕ್ತ ಸಹಕಾರಿ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ.ಪಾಟೀಲ್ ಹಾಗೂ ಸಂಯುಕ್ತ ಸಹಕಾರಿ ತರಬೇತಿ ಅಧಿಕಾರಿ ಶ್ರೀ ವಿ.ಜೆ ಕಾರಕೂನರವರು ಕಾರ್ಯಕ್ರಮಕ್ಕೆ ಸ್ವಾಗತ ಕೋರುತ್ತಿರುವುದು.

ಆರ್‌ಐಸಿಎಂನಲ್ಲಿ ಸಂಯುಕ್ತ ಸಹಕಾರಿಯ ನೂತನ ಸಿಬ್ಬಂದಿಗಳಿಗೆ ಹಾಗೂ ಈಗಾಗಲೇ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ದಿನಾಂಕ: 11-11-2011 ಮತ್ತು ದಿನಾಂಕ : 12-11-1-2011ರಂದು ಜರುಗಿದ ಎರಡು ದಿನಗಳ ತರಬೇತಿ ಕಾರ್ಯಕ್ರಮವು ಅತ್ಯುತ್ತಮವಾಗಿ ಜರುಗಿತು. ತರಬೇತಿಯಲ್ಲಿ ಉತ್ತಮವಾದ ಉಪನ್ಯಾಸಗಳನ್ನು ನೀಡಲಾಯಿತು.

# ಕದಂಬ ಕ್ರೆಡಿಟ್ ಸೌಹಾರ್ದ ಸಹಕಾರಿಯ ಕಛೇರಿ ಸ್ಥಳಾಂತರ ಸಮಾರಂಭ

ಶಿರಸಿ: ದಿನಾಂಕ13/11/2011 ರಂದು ಉತ್ತರ ಕನ್ನಡ ಜಿಲ್ಲೆಯ ಪ್ರತಿಷ್ಠಿತ ಕದಂಬ ಕ್ರೆಡಿಟ್ ಸೌಹಾರ್ದ ಸಹಕಾರಿಯ ಕಛೇರಿ ಸ್ಥಳಾಂತರ ಸಮಾರಂಭವನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಆರ್.ಸತೀಶ್‌ಚಂದ್ರರವರು ಉದ್ಘಾಟಿಸಿ ಸಹಕಾರಿಯ ಬೆಳವಣಿಗೆಯ ವೇಗ ಹೆಚ್ಚಿಸಲು ಕರೆ ನೀಡಿ ಸಹಕಾರಿಗೆ ಶುಭಕೋರಿದರು. ಸಹಕಾರಿಗಳ ಅಭಿವೃದ್ಧಿಗಾಗಿ ಕಡಿಮೆ ವೆಚ್ಚದ ಬಂಡವಾಳ ನಿರಂತರ ಅಧ್ಯಯನ ವೈಜಾನಿಕ ಹೂಡಿಕೆ, ತಾಂತ್ರಿಕತೆಯ ಅಳವಡಿಕೆಯ ಜೊತೆಗೆ ಹೊಸ ವಿಷಯಗಳನ್ನು ಅಧ್ಯಯನ ಮಾಡುವುದು ಅಗತ್ಯ ಎಂದು ತಿಳಿಸಿದರು.

ಹೋಮ ಹವನಗಳೊಂದಿಗೆ ಪ್ರಾರಂಭದ ಸಮಾರಂಭದಲ್ಲಿ ಕದಂಬ ಕ್ರೆಡಿಟ್ ಸೌಹಾರ್ದ ಸಹಕಾರಿಯ ಅನೇಕ ಸದಸ್ಯರು ಗಣ್ಯರು ಭಾಗವಹಿಸಿದ್ದರು. ಸಮಾರಂಭದ ಅಧ್ಯಕ್ಷತೆಯನ್ನು ಕದಂಬ ಸಹಕಾರಿಯ ಶ್ರೀಬಾಲಚಂದ್ರ.ಆರ್. ಹೆಗಡೆ ರವರು ವಹಿಸಿದ್ದರು.





## ರಸ್ತೆ ಅಪಘಾತದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್. ಸತೀಶ್‌ಚಂದ್ರರಿಗೆ ಗಾಯ

ನ.13ರಂದು ಸಂಯುಕ್ತ ಸಹಕಾರಿ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶ್‌ಚಂದ್ರರವರು ಶಿರಸಿಯಲ್ಲಿ ಉತ್ತರ ಕನ್ನಡ ಜಿಲ್ಲೆಯ ಘಟ್ಟದ ಮೇಲಿನ ತಾಲ್ಲೂಕುಗಳ ಸಹಕಾರಿಗಳ ಅವಲೋಕನ ಸಭೆ ಹಾಗೂ ಕದಂಬ ಕ್ರೆಡಿಟ್ ಸೌಹಾರ್ದ ಸಹಕಾರಿಯ ಕಛೇರಿ ಸ್ಥಳಾಂತರ ಸಮಾರಂಭದಲ್ಲಿ ಭಾಗವಹಿಸಿ ಬೆಂಗಳೂರಿಗೆ ವಾಪಸಾಗುತ್ತಿದ್ದಾಗ ದಾವಣಗೆರೆ ಸಮೀಪದಲ್ಲಿ ಅವರ ಕಾರಿನ ಮುಂದೆ ಚಲಿಸುತ್ತಿದ್ದ ಲಾರಿ ಚಾಲಕನ ತಪ್ಪಿನಿಂದಾಗಿ ಅಪಘಾತ ಸಂಭವಿಸಿ ಕಾರಿನಲ್ಲಿದ್ದ ಶ್ರೀ ಎಸ್. ಆರ್.ಸತೀಶ್‌ಚಂದ್ರರವರ ಎಡಗಾಲಿಗೆ ಪೆಟ್ಟಾಗಿದ್ದು ಚಿಕಿತ್ಸೆ ಪಡೆಯುತ್ತಿದ್ದಾರೆ.

ಅಂದು ಅವರೊಂದಿಗೆ ಇದ್ದ ತರಬೇತಿ ಅಧಿಕಾರಿ ಶ್ರೀ ವಿಜಯ ಕಾರಕೂನರಿಗೆ ಸಣ್ಣ ಪುಟ್ಟ ಮೆಟ್ಟಾಗಿದ್ದು, ಚಿಕಿತ್ಸೆಯ ನಂತರ ಚೇತರಿಸಿಕೊಂಡಿದ್ದಾರೆ. ಲಾರಿ ಚಾಲಕನ ಮೇಲೆ ದಾವಣಗೆರೆ ಪೊಲೀಸ್ ಠಾಣೆಯಲ್ಲಿ ಕೇಸು ದಾಖಲಿಸಲಾಗಿದೆ.

## ಚಿಂತನದ ತುಣುಕು 'ಸಾರ್ಥಕ ಜೀವನ'



ಕಬ್ಬಿನಿಂದ ಬೆಲ್ಲ, ಹಾಲಿನಿಂದ ತುಪ್ಪ
ವ್ಯಕ್ತಿಯಲ್ಲಿ ವ್ಯಕ್ತಿತ್ವಗಳಿಸಲು
ಪರಿಶ್ರಮದ ಅನಿವಾರ್ಯತೆ ಇದೆ
ಇದೇ ಅಲ್ಲವೇ ಸಾಥಕತೆಯ ಅನುಭವ?
ಪ್ರಕೃತಿ-ಸಂಸ್ಕೃತಿ
ಪ್ರಕೃತಿಯನ್ನು ಬಳಸಲು ಅವಕಾಶ ಇದೆ.
ಅದನ್ನು ಉಳಿಸುವುದು ನಮ್ಮ ಕತವ್ಯ,
ಬೆಳೆಸುವುದು ಅಷ್ಟೇ ಅನಿವಾರ್ಯ,
ಇದೇ ನಮ್ಮ ಸಂಸ್ಕೃತಿ.

– ಎಂ.ಎಸ್. ವೆಂಕಟೇಶ್

# ಪ್ರಪಂಚದಲ್ಲಿ ದುಡಿಯದೇ ಊಟ ಮಾಡುವ ಹಕ್ಕು ಯಾರಿಗೂ ಇಲ್ಲ

21ನೇ ಶತಮಾನ ಸ್ಪರ್ಧಾಯುಗ, ಮಾಹಿತಿ ತಂತ್ರಜ್ಞಾನಯುಗ ಹಾಗೂ ವೇಗದ ಯುಗವೆಂದು ವ್ಯಾಖ್ಯಾನಿಸಲಾಗುತ್ತದೆ. ಆದರೆ ಎಲ್ಲದಕ್ಕಿಂತ ಮೇಲಾಗಿ ಇದನ್ನು "ಕೆಲಸ ಮಾಡುವವರ ಯುಗ"ವೆಂದರೆ ಹೆಚ್ಚು ಸಮಂಜಸವೆನ್ನಬಹುದು. ಏಕೆಂದರೆ ಸ್ಪರ್ಧೆ, ಮಾಹಿತಿ ಹಾಗೂ ತಂತ್ರಜ್ಞಾನಗಳ ಅರಿವು ಕೆಲಸಮಾಡುವವರಿಗಲ್ಲದೆ ಆಲಸಿಗಳಿಗಲ್ಲ. ಕೆಲಸ ಮಾಡುವವರೆ ವೇಗವಾಗಿ ಬೆಳೆಯಬಲ್ಲರು.


ಪ್ರಪಂಚದಲ್ಲಿ ದುಡಿಯದೇ ಊಟ ಮಾಡುವ ಹಕ್ಕು ಯಾರಿಗೂ ಇಲ್ಲ. ಪ್ರತಿಯೊಬ್ಬನು ತನ್ನ ಅನ್ನವನ್ನು ಸಂಪಾದಿಸಲು ದುಡಿಯಲೇಬೇಕು. ಕೆಲಸ ಮಾಡದಿರುವುದೇ ಸೋಮಾರಿತನ, ಅದರಿಂದ ಬಡತನ, ಅದೇ ನಮ್ಮ ಶತ್ರುವಾಗಿ ಪರಿಣಮಿಸುತ್ತದೆ. ಕೆಲಸವನ್ನು ಏತಕ್ಕಾಗಿ ಮಾಡಬೇಕೆಂಬುದರ ಬಗ್ಗೆ ವಿಶ್ಲೇಷಿಸಿದಾಗ ಮಾನವನ ಮೂಲಭೂತ ಸೌಕರ್ಯಗಳಾಗಿರುವ ಉಣ್ಣಲು ಅನ್ನ, ಉಡಲು ಬಟ್ಟೆ ಮತ್ತು ವಾಸಿಸುವ ಮನೆಗಾಗಿ ಎಂದು ಅರ್ಥೈಸಬಹುದು. ಇವುಗಳ ಜೊತೆಗೆ ಸಾಮಾಜಿಕ ಸ್ಥಾನಮಾನ, ಕುಟುಂಬ ಜೀವನ, ಬಂಧುಮಿತ್ರರ ಒಡನಾಟ, ವೈಯಕ್ತಿಕ ಬೆಳವಣಿಗೆ, ಸಮಾಜಸೇವೆ, ಆತ್ಮತೃಪ್ತಿ, ಜೀವನಕ್ಕೆ ಭದ್ರತೆ, ಸ್ಥಿರತೆ ಇವೆಲ್ಲವೂ ನಾವು ನಿರ್ವಹಿಸುವ ಕೆಲಸದಿಂದ ಮಾತ್ರ ಸಾಧ್ಯವಾಗುತ್ತದೆ.

ನಾವು ಕೆಲಸ ಮಾಡಲೇಬೇಕೆಂದು ತೀರ್ಮಾನಿಸಿದಾಗ ಒಂದು ವರ್ಷದಲ್ಲಿ ನಾವು ಕೆಲಸಮಾಡುವ ದಿವಸಗಳನ್ನು ಲೆಕ್ಕಹಾಕಿದರೆ ಭಾನುವಾರಗಳು, ಎರಡನೇ ಶನಿವಾರಗಳು, ರಾಷ್ಟ್ರೀಯ ಹಬ್ಬಗಳು, ರಜೆಗಳು, ಆಕಸ್ಮಿಕ ರಜೆಗಳನ್ನು ಲೆಕ್ಕ ಹಾಕಿದಾಗ ಉಳಿಯುವುದು ಕೇವಲ 262 ದಿನಗಳು ಮಾತ್ರ. ದಿನಕ್ಕೆ 8 ಗಂಟೆಗಳಂತೆ ನಾವು ಕೆಲಸ ಮಾಡಿದರೆ ನಾವು ಮಾಡುವ ಒಟ್ಟು ಕೆಲಸದ ದಿನಗಳು ಒಂದು ವರ್ಷದಲ್ಲಿ ಕೇವಲ 88 ದಿನಗಳು ಮಾತ್ರ. ಆತ್ಮೀಯರೇ, ಈ 88 ದಿನಗಳ ನಮ್ಮ ಕೆಲಸದ ದಿನಗಳನ್ನು ನಾವು ಸಾರ್ಥಕವಾಗಿ, ನಿಷ್ಠೆಯಿಂದು ಹಾಗೂ ದಕ್ಷತೆಯಿಂದ ಕೆಲಸ ಮಾಡಬೇಕಲ್ಲವೇ? ಇಲ್ಲದಿದ್ದರೆ ನಮಗೆ ಕೆಲಸ ಒದಗಿಸಿದ ಸಂಸ್ಥೆಗೆ ಹಾಗೂ ಸರಕಾರಕ್ಕೆ ಮೋಸ ಮಾಡಿದಂತಾಗುವುದಿಲ್ಲವೇ? ಸ್ವಲ್ಪ ಯೋಚಿಸಿ. ಆದ್ದರಿಂದ ನಾವು ಕೆಲಸ ಮಾಡಲೇಬೇಕು. ನಾವು ಮಾಡುವ ಕೆಲಸದಲ್ಲಿ ನೈಪುಣ್ಯತೆಯಿರಬೇಕು. ನಮ್ಮ ಸಂಸ್ಥೆಯನ್ನು ಗೌರವಿಸಬೇಕು. ಸಂಸ್ಥೆಯ ಧ್ಯೇಯೋದ್ದೇಶಗಳನ್ನು ಅರ್ಥಮಾಡಿಕೊಳ್ಳಬೇಕು. ಸಂಸ್ಥೆಯ ಏಳ್ಗೆಗೆ ಶ್ರಮಿಸಬೇಕು. ಸಂಸ್ಥೆಯ ಏಳ್ಗೆ ನಮ್ಮ ಏಳ್ಗೆಯಲ್ಲವೇ? ಸಂಸ್ಥೆಯ ಅಭಿವೃದ್ಧಿಯಲ್ಲಿ ನಾವು ಪಾಲುದಾರರೆಂಬಂತೆ ಕಾರ್ಯನಿರ್ವಹಿಸಬೇಕು. ಆವಾಗಲೇ ಎಲ್ಲ ರೀತಿಯ ಸೌಲಭ್ಯಗಳು ನಮಗೆ ಒದಗಿ ಬರುತ್ತವೆ.



## ವೃತ್ತಿ ಸಂಸ್ಕೃತಿ

ಬಿ. ಎ. ಮಹದೇವಪ್ಪ,
ವ್ಯವಸ್ಥಾಪಕ ನಿರ್ದೇಶಕರು,
ಡಿ.ಸಿ.ಸಿ. ಬ್ಯಾಂಕ್, ಚಿಕ್ಕಮಗಳೂರು.



> ಸಾಮಾಜಿಕ ಸ್ಥಾನಮಾನ, ಕುಟುಂಬ ಜೀವನ, ಬಂಧುಮಿತ್ರರ ಒಡನಾಟ, ವೈಯಕ್ತಿಕ ಬೆಳವಣಿಗೆ, ಸಮಾಜಸೇವೆ, ಆತ್ಮತೃಪ್ತಿ, ಜೀವನಕ್ಕೆ ಭದ್ರತೆ, ಸ್ಥಿರತೆ ಇವೆಲ್ಲವೂ ನಾವು ನಿರ್ವಹಿಸುವ ಕೆಲಸದಿಂದ ಮಾತ್ರ ಸಾಧ್ಯವಾಗುತ್ತದೆ.

ಕೆಲಸ ನಿರ್ವಹಣೆಯಲ್ಲಿ ಸಮಯಪಾಲನೆಗೆ ಆದ್ಯತೆ ಇರಬೇಕು. ಅದು ಉತ್ತಮ ವ್ಯಕ್ತಿತ್ವದ ಲಕ್ಷಣ. ಹಣಕ್ಕಿಂತಲೂ ಸಮಯ ಹೆಚ್ಚು ಮೌಲ್ಯವುಳ್ಳದ್ದು, ನಿಮಿಷ, ಸೆಕೆಂಡುಗಳಿಗೆ ಬೆಲೆಕೊಡದವನು ತನ್ನ ಜೀವನಕ್ಕೂ ಬೆಲೆಕೊಡಲಾರದವನು ಎಂದು ವ್ಯಾಖ್ಯಾನಿಸಲಾಗುತ್ತದೆ. ಆದ್ದರಿಂದ ಸಮಯ ಪ್ರಜ್ಞೆ ಈ ವೃತ್ತಿ ಸಂಸ್ಕೃತಿಯಲ್ಲಿ ಮಹತ್ವದ್ದು.ನಮ್ಮ ವೃತ್ತಿಯ ಬಗ್ಗೆ ಕೀಳರಿಮೆ ಬೇಡ. ಗೌರವ ಇರಲಿ ಆವಾಗಲೆ ಬದ್ಧತೆ ಹಾಗೂ ತಲ್ಲೀನತೆಯು ಬೆಳೆದು ಉತ್ತಮ ಕೆಲಸಗಾರ ಎಂದು ಹೇಳಿಸಿಕೊಳ್ಳಬಹುದು. ಕೆಲಸವನ್ನು ಮುಂದೂಡುವ ಸ್ವಭಾವವನ್ನು ಬೆಳಸಿಕೊಳ್ಳದೆ ಈಗಲೇ ಮಾಡುವ ಸ್ವಭಾವದವರಾಗಬೇಕು,

"DO IT NOW" ಎಂಬ "ಏಳು" ಸುವರ್ಣಾಕ್ಷರಗಳನ್ನು ಎಂದಿಗೂ ಮರೆಯಬಾರದು. ಕೆಲವು ಕೆಲಸಗಳನ್ನು ನಾವೇ ಮಾಡುವುದಾದಲ್ಲಿ ಮಾಡಬೇಕು. ಇಲ್ಲವಾದಲ್ಲಿ ಬೇರೆಯವರಿಗೆ ವಹಿಸಿ ಮಾಡುವುದಾದರೆ ಹಾಗೆ ಮಾಡಬೇಕು. ಕೆಲಸದಲ್ಲಿ ವೃತ್ತಿಪರತೆಯನ್ನು ರೂಢಿಸಿಕೊಳ್ಳಬೇಕು. ಆತ್ಮೀಯ ಮಾತುಗಾರಿಕೆ, ನಗುಮುಖದಿಂದ ಕಾರ್ಯನಿರ್ವಹಣೆ, ಉತ್ತಮ ಸಂವಹನ (Perfect communication) ಜವಾಬ್ದಾರಿಯಿಂದ ಕಾರ್ಯನಿರ್ವಹಿಸುವುದು, ವಾದ ಮಾಡದೆ ಚರ್ಚೆಯಿಂದ ಮುಕ್ತ ಮನಸ್ಸಿನಿಂದ ವಿಷಯ ತಿಳಿದು ಕಾರ್ಯನಿರ್ವಹಿಸುವುದು ಉತ್ತಮವಾದದ್ದು.

ಕೆಲಸದ ಸಮಯದಲ್ಲಿ ಹೆಚ್ಚು ಹೊತ್ತು ಹರಟೆ ಹೊಡೆಯುವುದು, ಅನಗತ್ಯ ಟೆಲಿಫೋನ್ ಸಂಭಾಷಣೆಗಳು ಉತ್ತಮ ಕೆಲಸಗಾರನ ಲಕ್ಷಣಗಳಲ್ಲ. ಯಾವಾಗಲೂ ಇತರರ ಬಗ್ಗೆ ಮಾತನಾಡುವುದು ಸಣ್ಣ ಮನಸ್ಕರ ಲಕ್ಷಣ, ಸಾಧಾರಣ ವ್ಯಕ್ತಿಗಳು ವಿಷಯದ ಬಗ್ಗೆ ಮಾತನಾಡಿದರೆ, ಮಹಾನ್ ವ್ಯಕ್ತಿಗಳು ಸಿದ್ಧಾಂತದ ಬಗ್ಗೆ ಮಾತನಾಡುತ್ತಾರೆ. ಆದ್ದರಿಂದ ನಾವುಗಳು ಪ್ರಾಮಾಣಿಕವಾಗಿ ನಮ್ಮ ಕೆಲಸದ ಬಗ್ಗೆ ಚಿಂತನೆ ಮಾಡಿ ನಿಗದಿತ ಸಮಯದಲ್ಲಿ ಸಂಸ್ಥೆಯ ಅಭಿವೃದ್ಧಿ ದೃಷ್ಟಿಯಿಂದ ಕಾರ್ಯನಿರ್ವಹಿಸುವುದೇ ನಮ್ಮ ವೃತ್ತಿ ಸಂಸ್ಕೃತಿಯ ಅಗತ್ಯತೆಯಾಗುತ್ತದೆ. ಕೆಲಸಗಾರನ ವ್ಯಕ್ತಿತ್ವ ವಿಕಸನಕ್ಕೆ ಮೆಟ್ಟಿಲಾಗುತ್ತದೆ. ■

# ಸಹಕಾರಿ ನಿಬಂಧಕರು ನಿರ್ವಹಿಸುವ ಕಾರ್ಯಗಳು



**ಸಿ.ಎನ್. ಪರಶಿವಮೂರ್ತಿ**
ಸಹಕಾರ ಸಂಘಗಳ
ನಿವೃತ್ತ ಅಪರ ನಿಬಂಧಕರು

(ಹಿಂದಿನ ಸಂಚಿಕೆಯಿಂದ)

**4. ವಿಚಾರಣೆ :**

ಒಂದು ಸಹಕಾರಿಯ ರಚನೆ, ವ್ಯವಸ್ಥಾಪನೆ, ಕಾರ್ಯನಿರ್ವಹಣೆ ಅಥವಾ ಹಣಕಾಸಿನ ಪರಿಸ್ಥಿತಿಗಳಿಗೆ ಸಂಬಂಧಿಸಿದ ನಿರ್ದಿಷ್ಟ ವಿಷಯದಲ್ಲಿ ವಿಚಾರಣೆ ನಡೆಸಬಹುದು. ಆದರೆ ಸ್ವಯಂ ಸ್ಫೂರ್ತಿಯಿಂದ ವಿಚಾರಣೆ ಮಾಡಲು ಅವಕಾಶವಿಲ್ಲ. ವಿಚಾರಣೆ ನಡೆಸಬೇಕಾದರೆ (1) ಸಂಯುಕ್ತ ಸಹಕಾರಿ (2) ಆಡಳಿತ ಮಂಡಳಿಯ 1/3 ಅಥವಾ 1/10 ಸಹಕಾರಿಯ ಸದಸ್ಯರು ಲಿಖಿತ ಅರ್ಜಿ ಸಲ್ಲಿಸಿದರೆ, ನಿಬಂಧಕರು ವಿಚಾರಣೆ ನಡೆಸತಕ್ಕದ್ದು. (ಕಲಂ 35). ವಿಚಾರಣೆಯನ್ನು ಅವರೇ ನಡೆಸಬಹುದು ಅಥವಾ ಮತ್ತೊಬ್ಬ ವಿಚಾರಣಾಧಿಕಾರಿಯನ್ನು ನೇಮಿಸಬಹುದು. ವಿಚಾರಣೆಯನ್ನು ಹನ್ನೆರಡು ತಿಂಗಳೊಳಗೆ, ಅವಶ್ಯವಿದ್ದರೆ ಆರು ತಿಂಗಳು ವಿಸ್ತರಿಸುವ ಅವಕಾಶ ಕಲ್ಪಿಸಲಾಗಿದೆ.

**5. ವಿವಾದಗಳ ಇತ್ಯರ್ಥ :**

ಸಹಕಾರಿ ಅಥವಾ ಸಂಯುಕ್ತ ಸಹಕಾರಿಯ ರಚನೆ, ವ್ಯವಸ್ಥಾಪನೆ ಅಥವಾ ವ್ಯವಹಾರದ ಸಂಬಂಧ ವಿವಾದಗಳ ಸ್ವೀಕರಣೆ, ವಿಚಾರಣೆ, ತೀರ್ಪು ಕೊಡುವ ಅಧಿಕಾರ ನಿಬಂಧಕರಿಗೆ ಕೊಡಲಾಗಿದೆ. ಸಹಕಾರಿಯ ಕಾರ್ಯವ್ಯಾಪ್ತಿಗನುಗುಣವಾಗಿ ಸರ್ಕಾರ ಕಲಂ 3(3)ರನ್ವಯ ವಿವಿಧ ಮಟ್ಟದ ಅಧಿಕಾರಿಗಳಿಗೆ ಸ್ವೀಕರಿಸುವ, ತೀರ್ಮಾನ ಮಾಡುವ ಅಧಿಕಾರವನ್ನು ಆದೇಶ ಸಂಖ್ಯೆ: ಸಿಎಂಡಬ್ಲ್ಯೂ/34ಸಿಎಲೆಂ/2001 ದಿನಾಂಕ: 28-02-2003. ಸಿಒ/220ಸಿಎಲೆಂ/ 2005 ದಿನಾಂಕ: 22-8-2005ರಲ್ಲಿ ನಿಬಂಧಕರ ಅಧಿಕಾರವನ್ನು ವರ್ಗಾಯಿಸಿದೆ. (ಕಲಂ 39) ವಿವಾದ ಇತ್ಯರ್ಥದಲ್ಲಿ ಯಾರು ಯಾರ ಮೇಲೆ ದಾವಾ ದಾಖಲಿಸಬಹುದು (ಕಲಂ 39(1)) ಮತ್ತು ಯಾವ ವಿಷಯದಲ್ಲಿ ದಾವಾ ಪ್ರಕರಣ ದಾಖಲಿಸಬಹುದು (ಕಲಂ 39(2)). ವಿವಾದಗಳನ್ನು ಕಾರಣ ಉಂಟಾದ ದಿನಾಂಕದಿಂದ ಆರು ವರ್ಷದೊಳಗೆ ಹಾಗೂ ನಿರ್ದೇಶಕರು / ಪದಾಧಿಕಾರಿಗಳ ಆಯ್ಕೆ ಬಗ್ಗೆ ಮೂವತ್ತು ದಿನಗಳೊಳಗೆ ದಾಖಲಿಸಬೇಕೆಂದು ಶರತ್ತು ವಿಧಿಸಲಾಗಿದೆ. (ಕಲಂ 40(1)) ಈ ರೀತಿ ನಿಗದಿಪಡಿಸಿದ ಅವಧಿಗೆ ಸಲ್ಲಿಸಲು ವಿಳಂಬವಾದರೆ, ಸಕಾರಣಗಳೊಂದಿಗೆ ಪ್ರಮಾಣ ಪತ್ರ ಸಲ್ಲಿಕೆ ವಿಳಂಬ ವಿನಾಯಿತಿ ಪಡೆಯಲು ಅವಕಾಶ ಕಲ್ಪಿಸಿದೆ. (ಕಲಂ 4092))



**6. ಸಹಕಾರಿಯ ಸಮಾಪನೆ : ಸ್ವಯಂ ಸಮಾಪನೆ**

ಒಂದು ಸಹಕಾರಿಯ 1/5 ಕಡಿಮೆ ಇಲ್ಲದ ಸದಸ್ಯರು ಸಮಾಪನೆ ಮಾಡಬೇಕೆಂದು ಲಿಖಿತ ಮನವಿ ಸಲ್ಲಿಸಿದಾಗ, ಆಡಳಿತ ಮಂಡಳಿ, ಆ ಅರ್ಜಿಯ ಆಧಾರದ ಮೇಲೆ ಸಾಮಾನ್ಯ ಸಭೆಯನ್ನು ಕರೆಯತಕ್ಕದ್ದು. ಈ ಸಾಮಾನ್ಯ ಸಭೆಯ ನೋಟೀಸ್ ಪ್ರತಿಯನ್ನು ಸಂಯುಕ್ತ ಸಹಕಾರಿ, ಒಕ್ಕೂಟ ಸಹಕಾರಿ, ಸಾಲಿಗರು, ಲೆಕ್ಕಪರಿಶೋಧಕರು ಮತ್ತು ಸಹಕಾರಿಯ ಅಧೀನ ಸಂಸ್ಥೆಗಳಿಗೂ ಕಳುಹಿಸತಕ್ಕದ್ದು(ಕಲಂ 47(1))

**7. ನಿಬಂಧಕರಿಂದ ಸಮಾಪನೆ :**

ಲೆಕ್ಕ ಪರಿಶೋಧನೆ ವರದಿ, ವಿಚಾರಣೆ ವರದಿ ಹಾಗೂ ಸಹಕಾರಿಯ 3/4 ಸದಸ್ಯರು ಸಲ್ಲಿಸಿದ ಅರ್ಜಿ ಆಧಾರದ ಮೇಲೆ ನಿಬಂಧಕರು ಒಂದು ಸಹಕಾರಿಯನ್ನು ಸಮಾಪನೆಗೊಳಿಸುವ ಮತ್ತು ಸಮಾಪನಾಧಿಕಾರಿ ನೇಮಿಸುವ ಅಧಿಕಾರ ಹೊಂದಿದ್ದಾರೆ (ಕಲಂ 48(1)).

ಸಹಕಾರಿಯು (1) ನೋಂದಣಿಯ ಎರಡು ವರ್ಷ ವ್ಯವಹಾರ ಪ್ರಾರಂಭಿಸದಿದ್ದರೆ (2) ಸತತ ಎರಡು ವರ್ಷದ ವ್ಯವಹಾರ ನಡಿಸಿರದಿದ್ದರೆ (3) ಸಹಕಾರ ತತ್ವ, ಕಾಯಿದೆ, ನಿಯಮ ಮತ್ತು ಉಪನಿಯಮಗಳನುಸಾರ ಕಾರ್ಯ ನಿರ್ವಹಿಸದಿದ್ದರೆ, ಎಂಬುದರ ಬಗ್ಗೆ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯಿಂದ ಪ್ರಮಾಣ ಪತ್ರ ಪಡೆಯತಕ್ಕದ್ದು. ಆ ಮಾಹಿತಿಯನ್ನು ಮೂವತ್ತು ದಿನದೊಳಗೆ ಸಲ್ಲಿಸದಿದ್ದರೆ, ಅದನ್ನು ದಾಖಲಿಸಿ, ಸಮಾಪನೆ ಆದೇಶ ಹೊರಡಿಸತಕ್ಕದ್ದು. (ಕಲಂ 48(2))

ಮೇಲ್ಕಂಡ ಆರು ಅಧಿಕಾರಗಳನ್ನು ಹೊರತುಪಡಿಸಿ, ನಿಬಂಧಕರು ನಿರ್ವಹಿಸಬೇಕಾದ ಎಲ್ಲಾ ಕಾನೂನುಬದ್ಧ ಅಧಿಕಾರಗಳನ್ನು ಚಲಾಯಿಸುವ ಅಧಿಕಾರ ಕಾಯಿದೆಯಲ್ಲಿಯೇ ಸ್ಥಾಪನೆಗೊಂಡಿರುವ ಸಂಯುಕ್ತ ಸಹಕಾರಿಗೆ ವರ್ಗಾಯಿಸಲಾಗಿದೆ. ಆದರೂ ಯಾವುದೇ ಸಂದರ್ಭದಲ್ಲಿ ಸಂಯುಕ್ತ ಸಹಕಾರಿ ತನ್ನ ಅಧಿಕಾರ ಚಲಾಯಿಸಲು ವಿಫಲವಾದರೆ, ನಿಬಂಧಕರು ಮಧ್ಯಪ್ರವೇಶ ಮಾಡುವ ಅಧಿಕಾರ ಇದೆ. ಆದ್ದರಿಂದ ಸಂಯುಕ್ತ ಸಹಕಾರಿ, ನಿಬಂಧಕರ ಉಳಿದ ಎಲ್ಲಾ ಅಧಿಕಾರಗಳಿಗೂ ಕಾರ್ಯ ನಿರ್ವಹಿಸತಕ್ಕದ್ದು. ನಾನು ಹಿಂದಿನ ಸಂಚಿಕೆಯಲ್ಲಿ ತಿಳಿಸಿದಂತೆ, ನಿಬಂಧಕರ ಕೆಲಸ ನಿರ್ವಹಿಸಲು ಮೂಲ ಸೌಲಭ್ಯಗಳನ್ನು ಕಲ್ಪಿಸಿಕೊಂಡು, ಕನಿಷ್ಠ ಜಿಲ್ಲಾ ಮಟ್ಟದ ಕಛೇರಿಗಳ ಮುಖಾಂತರವಾದರೂ ಸಹಕಾರಿಗಳ ಮೇಲೆ, ಅವರು ಚುರುಕುತನದಿಂದ ಕೆಲಸ ನಿರ್ವಹಿಸಲು ಕಾರ್ಯ ಪ್ರಮುಖರಾಗಬೇಕು. ಇದರ ಜೊತೆ ವಿದ್ಯಾ ನಿಧಿ ಉಪಯೋಗದ ಬಗ್ಗೆ ವಿಮರ್ಶಿಸಿದ್ದೇನೆ.

**(1) ಸಹಕಾರಿಗಳನ್ನು ಪ್ರವರ್ತಿಸುವುದು ಹಾಗೂ ಸಂಘಟಿಸುವುದು ಮತ್ತು ಮಾದರಿ ಉಪನಿಯಮ ರಚನೆ, ಸಹಕಾರಿಗಳಿಗೆ ಸಹಕಾರಿ ತತ್ವಗಳ ಅನುಸರಣೆಗೆ ಕಾರ್ಯನೀತಿ ರೂಪಿಸುವುದು :**

ಸಂಯುಕ್ತ ಸಹಕಾರಿ ಪತ್ತಿನ ವ್ಯವಸ್ಥೆಗೆ ಸಂಬಂಧಪಟ್ಟಂತೆ ಉಪನಿಯಮ ರಚಿಸಿದೆ ಮತ್ತು ಇದೇ ರೀತಿ ಇನ್ನಿತರ ವ್ಯವಸ್ಥೆ ಬಗ್ಗೆ ಶ್ರಮ ಜರುಗಿಸುವ ವ್ಯವಸ್ಥೆ ನಡೆದಿಲ್ಲ. ಈಗ ನೋಂದಾವಣೆಯಾಗಿರುವ ಸಹಕಾರಿಗಳು ಬಹು ಸಂಖ್ಯೆಯಲ್ಲಿ ಪತ್ತಿನ ವ್ಯವಸ್ಥೆಗೆ ಸಂಬಂಧಪಟ್ಟವೆ ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ವೃತ್ತಿಪರ ವ್ಯವಸ್ಥೆಗೆ ಹೊಂದಿಕೊಂಡು ಸದಸ್ಯರಿಗೆ ಅಗತ್ಯ ಸೇವೆ ಸಲ್ಲಿಸುತ್ತಿವೆ. ಸಹಕಾರಿಗಳ ಸಂಘಟನೆ ಮಾಡುವ ಸಂದರ್ಭದಲ್ಲಿ ಬೆರಳೆಣಿಕೆಯ ಸಂಖ್ಯೆಯ ಸಹಕಾರಿಗಳು ಅಡ್ಡದಾರಿ ಹಿಡಿದಿರುವುದನ್ನು ಗಮನಿಸಿದರೂ, ಅವುಗಳು ಕೊಡುವ ಸಂದೇಶ ಸೌಹಾರ್ದ

ಮುಂದಿನ ಸಂಚಿಕೆಗೆ...

## ಮೈಸೂರಿನಲ್ಲಿ ಶ್ರೀ ಗುರುನಾಥ ಜ್ಯಾಂತೀಕರರವರ ಪತ್ರಿಕಾಗೋಷ್ಠಿ



**ಸಂಯುಕ್ತ** ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರರವರು ಪತ್ರಿಕಾಗೋಷ್ಠಿ ನಡೆಸಿ ರಾಜ್ಯದಲ್ಲಿ 1850ಕ್ಕೂ ಹೆಚ್ಚು ಸಹಕಾರಿಗಳು ಕಾರ್ಯನಿರ್ವಹಿಸುತ್ತಿವೆ. ಈ ಒಂದು ದಶಕದ ಅವಧಿಯಲ್ಲಿ ಸೌಹಾರ್ದ ಸಹಕಾರಿಗಳ ಪ್ರಗತಿ ತೃಪ್ತಿದಾಯಕವಾಗಿದೆ. ಸರ್ಕಾರದ ಹಾಗೂ ಸಾರ್ವಜನಿಕರ ಗಮನವನ್ನು ಸೆಳೆದಿದೆ. ಸಹಕಾರಿ ಕ್ಷೇತ್ರಕ್ಕೆ ಬಲತಂದುಕೊಟ್ಟಿದೆ. ಮೈಸೂರು ವಿಭಾಗದಲ್ಲಿ ಈ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಯ ವೇಗ ಹೆಚ್ಚಿಸುವುದು ಅಗತ್ಯವೆಂದು ತಿಳಿಸಿದ ಶ್ರೀಯುತರು ಕ್ರೆಡಿಟ್ ಸಹಕಾರ ಸಂಘಗಳಿಗೆ ಮಾರಕವಾಗಲಿರುವ ಕೇಂದ್ರ ಸರಕಾರದ "ನೇರ ತೆರಿಗೆ ಪದ್ಧತಿ"ಯನ್ನು ವಿರೋಧಿಸಿ ಡಿಸೆಂಬರ್ ಮಾಹೆಯಲ್ಲಿ ರಾಜ್ಯ ಮಟ್ಟದ ಬೃಹತ್ ಸಮಾವೇಶವನ್ನು ಜರುಗಿಸುವ ಸಿದ್ಧತೆ ನಡೆಯುತ್ತಿದೆ ಎಂದು ತಿಳಿಸಿದರು. ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಹೆಚ್.ವಿ.ರಾಜೀವ್ ಹಾಗೂ ಉಪಪ್ರಧಾನ ವ್ಯವಸ್ಥಾಪಕ ಶ್ರೀ ವೈ.ಕುಮಾರ್‌ರವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ಭೈರಪ್ಪನವರಿಗೆ ಸರಸ್ವತಿ ಸಮ್ಮಾನ್




ನಾಡಿನ ಹೆಸರಾಂತ ಬರಹಗಾರ ಶ್ರೀ ಎಸ್.ಎಲ್.ಭೈರಪ್ಪನವರಿಗೆ ಕೆ.ಕೆ. ಬಿರ್ಲಾ ಪ್ರತಿಷ್ಠಾನದ 2010ರ ಸರಸ್ವತಿ ಸಮ್ಮಾನ್ ಪ್ರಶಸ್ತಿಯನ್ನು 16–11–2011ರಂದು ದೆಹಲಿಯಲ್ಲಿ ಪ್ರದಾನಮಾಡಲಾಯಿತು.

ಭಾರತೀಯ ಸಾಂಸ್ಕೃತಿಕ ಸಂಬಂಧಗಳ ಪರಿಷತ್ ಅಧ್ಯಕ್ಷ ಡಾ.ಕರಣ್‌ಸಿಂಗ್ ಪ್ರಶಸ್ತಿ ಪ್ರದಾನ ಮಾಡಿದರು. ಈ ಪ್ರಶಸ್ತಿ ಫಲಕದೊಂದಿಗೆ ರೂ. 7.5 ಲಕ್ಷ ನಗದು ಒಳಗೊಂಡಿದೆ.

# ಗುಣಾತ್ಮಕ ಸಾಲ ಹಾಗೂ ವೈಜ್ಞಾನಿಕ ದಾಖಲೆ ಪತ್ರಗಳ ನಿರ್ವಹಣೆಯಿಂದ ಸಹಕಾರಿಗಳ ಗುಣಮಟ್ಟ ಸುಧಾರಣೆ ಸಾಧ್ಯ - ಗುರುನಾಥ ಜ್ಯಾಂತೀಕರ





**ಮೈಸೂರು:** ದಿನಾಂಕ 22/11/2011 ರಂದು ಗುಣಾತ್ಮಕ ಸಾಲ ಹಾಗೂ ವೈಜ್ಞಾನಿಕ ದಾಖಲೆ ಪತ್ರಗಳ ನಿರ್ವಹಣೆಯಿಂದ ಸಹಕಾರಿಗಳ ಗುಣಮಟ್ಟ ಸುಧಾರಣೆ ಸಾಧ್ಯ. ಶ್ರೀ ಗುರುನಾಥ ಜ್ಯಾಂತೀಕರ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ದಿನಾಂಕ 22/11/2011ರಂದು ಮೈಸೂರಿನಲ್ಲಿ ಜಿಲ್ಲಾ ಸಹಕಾರಿ ಯೂನಿಯನ್ ಸಹಯೋಗದೊಂದಿಗೆ ಮೈಸೂರು ವಿಭಾಗದ ಸೌಹಾರ್ದ ಸಹಕಾರಿಗಳಿಗಾಗಿ ಗುಣಾತ್ಮಕ ಸಾಲ–ದಾಖಲೆ ಪತ್ರಗಳ ನಿರ್ವಹಣೆ ಹಾಗೂ ಸಾಲ ವಸೂಲಾತಿ ಕ್ರಮಗಳ ಬಗ್ಗೆ ತರಬೇತಿ ಕಾರ್ಯಾಗಾರವನ್ನು ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತೀಕರರವರು ಉದ್ಘಾಟಿಸಿ ಸಹಕಾರಿ ಸಂಸ್ಥೆಗಳಲ್ಲಿ ಸಾಲ ನೀಡುವಿಕೆ ಗುಣಾತ್ಮಕವಾಗಿರಬೇಕು, ದಾಖಲಾತಿಗಳನ್ನು ಒಂದು ವೈಜ್ಞಾನಿಕ ವಿಧಾನದಿಂದ ನಿರ್ವಹಿಸಬೇಕು ಮತ್ತು ಸಾಲ ವಸೂಲಾತಿಕ್ರಮಗಳನ್ನು ಕಾನೂನು ಬದ್ಧವಾಗಿ ಸಮಯಕ್ಕೆ ಸರಿಯಾಗಿ ನಿರ್ವಹಿಸಿದಲ್ಲಿ ಸಹಕಾರಿ ಸಂಸ್ಥೆಗಳ ಗುಣಮಟ್ಟ ಸುಧಾರಣೆಯ ಜೊತೆಗೆ ಲಾಭಾಂಶ ಹೆಚ್ಚುತ್ತದೆ. ಸಹಕಾರಿ ಸಂಸ್ಥೆಗಳ ವಹಿವಾಟು ಸುಧಾರಿಸುತ್ತದೆ ಎಂದು ತಿಳಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ಮೈಸೂರು ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಹೆಚ್.ವಿ. ರಾಜೀವ್‌ರವರು ವಹಿಸಿ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರ ಉತ್ತಮವಾಗಿ ಕಾರ್ಯನಿರ್ವಹಿಸುತ್ತದೆ ಎಂದು ಸಹಕಾರಿಗಳು ಅಭಿಪ್ರಾಯಪಡುತ್ತಿರುವುದು ಸ್ವಾಗತಾರ್ಹ. ಸಹಕಾರಿಗಳ ಉತ್ತಮ ಕಾರ್ಯನಿರ್ವಹಣೆಗೆ ಅಗತ್ಯವಾಗುವ ಶಿಕ್ಷಣ, ತರಬೇತಿ ಹಾಗೂ ಪ್ರಚಾರ ಕಾರ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುತ್ತಿದೆ. ಸಹಕಾರಿಗಳು ಇವುಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಪ್ರಯೋಜನ ಪಡೆಯಬೇಕೆಂದರು.

ಕಾರ್ಯಕ್ರಮದಲ್ಲಿ ಮುಖ್ಯ ಅಥಿತಿಗಳಾಗಿ ಹಾಗೂ ಸಂಪನ್ಮೂಲ ವ್ಯಕ್ತಿಗಳಾಗಿ ಜಂಟಿ ನಿಬಂಧಕ ಶ್ರೀ ಎ.ಸಿ. ದಿವಾಕರ, ನಿವೃತ್ತ ಅಪರ ನಿಬಂಧಕ ಶೀ ಸಿ.ಎಸ್. ಪರಶಿವಮೂರ್ತಿ, ಸಹಾಯಕ ನಿಬಂಧಕ ಶ್ರೀ ಎಸ್.ಜಿ. ಜೋಶಿ, ಮೈಸೂರು ಜಿಲ್ಲಾ ಸಹಕಾರಿ ಸಂಘಗಳ ಉಪ ನಿಬಂಧಕ ಶ್ರೀ ಪ್ರಕಾಶರಾವ್ ಮುಂತಾದವರು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ 38 ಸೌಹಾರ್ದ ಸಹಕಾರಿಗಳ 80 ಪ್ರತಿನಿಧಿಗಳು ಭಾಗವಹಿಸಿದ್ದರು.

# ತರಬೇತಿಯಲ್ಲಿ ಪಾಲ್ಗೊಳ್ಳುವುದರಿಂದ ಸಿಬ್ಬಂದಿಯ ಕಾರ್ಯದಕ್ಷತೆ ಹೆಚ್ಚಿಸಿಕೊಳ್ಳಲು ಸಾಧ್ಯ – ಗುರುನಾಥ ಜ್ಯಾಂತೀಕರ

**ಯಾವುದೇ** ತರಬೇತಿ ಕಾರ್ಯಕ್ರಮವಿರಲಿ ಅದರಲ್ಲಿ ಪಾಲ್ಗೊಳ್ಳುವುದು ಮುಖ್ಯ, ಪ್ರತಿಯೊಂದು ತರಬೇತಿ ಕಾರ್ಯಕ್ರಮದಲ್ಲಿ ಒಂದು ಹೊಸ ವಿಷಯವನ್ನು ಕಲಿತುಕೊಳ್ಳುವ ಅವಕಾಶವಿರುತ್ತದೆ. ಹೀಗಾಗಿ ನಮ್ಮ ಜ್ಞಾನದ ಮಟ್ಟ ಹೆಚ್ಚಾಗಿ ಕಾರ್ಯದಕ್ಷತೆ ಹೆಚ್ಚಿಸಿಕೊಳ್ಳಲು ಹಾಗೂ ಸಹಕಾರಿಯ ಅಭಿವೃದ್ಧಿಗೆ ಪೂರಕ ಎಂದು ಸಂಯುಕ್ತ ಸಹಕಾರಿಯ ಉಪಾಧ್ಯಕ್ಷ ಶ್ರೀ ಗುರುನಾಥ ಜ್ಯಾಂತೀಕರ ಕಿವಿಮಾತು ಹೇಳಿದರು.

ನ.28ರಂದು ಬೆಂಗಳೂರು ವಿಭಾಗದ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗಾಗಿ ಹಾಗೂ ಅಧಿಕಾರಿಗಳಿಗಾಗಿ ಏರ್ಪಡಿಸಿದ್ದ ತರಬೇತಿ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಬೆಂಗಳೂರು ವಿಭಾಗದ ಸೌಹಾರ್ದ ಸಹಕಾರಿಗಳಿಗಾಗಿ ಸಾಲಪತ್ರ ದಾಖಲಾತಿ ಹಾಗೂ ಸಾಲ ವಸೂಲಾತಿ ಕ್ರಮಗಳ ಕಾರ್ಯಾಗಾರ ಸೌಹಾರ್ದ ಸಹಕಾರಿಗಳ ಗುಣಮಟ್ಟ ಸುಧಾರಣೆಗೆ ಅತಿ ಅವಶ್ಯಕವಾದದ್ದು, ಅಲ್ಲದೇ ಕಾರ್ಯಕ್ರಮದ ಪೂರ್ಣ ಪ್ರಯೋಜನ ಪಡೆದುಕೊಳ್ಳಲು ಸಲಹೆ ನೀಡಿದರು.

ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ. ಪಾಟೀಲ್‌ರವರು ಸ್ವಾಗತ ಹಾಗೂ ಪ್ರಾಸ್ತಾವಿಕ ಭಾಷಣ ಮಾಡಿದರು. ಶ್ರೀ ವೈ. ಕುಮಾರ್‌ರವರು ವಂದನಾರ್ಪಣೆ ಮಾಡಿದರು. ಕಾರ್ಯಕ್ರಮದಲ್ಲಿ ಸಹಕಾರ ಸಂಘಗಳ ಸಹಾಯಕ ನಿಬಂಧಕ ಶ್ರೀ ಎಸ್.ಜಿ.ಜೋಶಿಯವರು ಸಾಲಪತ್ರ ದಾಖಲಾತಿ ಹಾಗೂ ಸಹಕಾರ ಸಂಘಗಳ ಅದರ ನಿಬಂಧಕರು (ನಿವೃತ್ತ) ಶ್ರೀ ಸಿ.ಎಸ್.ಪರಶಿವಮೂರ್ತಿಯವರು ಸೌಹಾರ್ದ ಸಹಕಾರ ಕಾಯ್ದೆಯ ಮುಖ್ಯಾಂಶಗಳ ಬಗ್ಗೆ ವಿವರ ನೀಡಿದರು. ಕಾರ್ಯಕ್ರಮದಲ್ಲಿ 78 ಸೌಹಾರ್ದ ಸಹಕಾರಿಗಳ 126 ಪ್ರತಿನಿಧಿಗಳು ಭಾಗವಹಿಸಿದ್ದರು.



## ಸಂಯುಕ್ತ ಸಹಕಾರಿಯ ಡಿಸೆಂಬರ್ ತಿಂಗಳ ಕಾರ್ಯಕ್ರಮಗಳು

| ಕ್ರ.ಸಂ. | ಕಾರ್ಯಕ್ರಮ | ದಿನಾಂಕ | ಸ್ಥಳ |
|---|---|---|---|
| 1. | ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮ | 1/12/2011 ರಿಂದ 10/12/2011 ರವರೆಗೆ | ಹಂಪಿ |
| 2. | ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳ ಕಾರ್ಯಾಗಾರ ಹಾಗೂ ವಾರ್ಷಿಕ ಪ್ರಗತಿ ಪರಿಶೀಲನಾ ಸಭೆ. ಬೆಳಗಾವಿ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗೆ ಮಾತ್ರ. | 23/12/2011 | ಬೆಳಗಾವಿ |
| 3. | ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳ ಕಾರ್ಯಾಗಾರ ಹಾಗೂ ವಾರ್ಷಿಕ ಪ್ರಗತಿ ಪರಿಶೀಲನಾ ಸಭೆ. ಬೆಳಗಾವಿ ಜಿಲ್ಲೆ ಹೊರತು ಪಡಿಸಿ ಬೆಳಗಾವಿ ವಿಭಾಗದ ಉಳಿದ ಜಿಲ್ಲೆಗಳು | 24/12/2011 | ಬೆಳಗಾವಿ |
| 4. | ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳ ಕಾರ್ಯಾಗಾರ ಹಾಗೂ ವಾರ್ಷಿಕ ಪ್ರಗತಿ ಪರಿಶೀಲನಾ ಸಭೆ. ಬೆಂಗಳೂರು ಹಾಗೂ ಮೈಸೂರು ವಿಭಾಗದ ಎಲ್ಲ ಜಿಲ್ಲೆಗಳು. | 26/12/2011 | ಬೆಂಗಳೂರು |

## ಜನವರಿ 1 ರಂದು ಸೌಹಾರ್ದ ಸಹಕಾರಿ ದಿನಾಚರಣೆ ಬಿಜೃಂಬಣೆಯಿಂದ ಆಚರಿಸಲು ಕರೆ

**ಕರ್ನಾಟಕ** ರಾಜ್ಯದಲ್ಲಿ ಜನವರಿ 1, 2001 ರಂದು ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬಂದ ಪ್ರಯುಕ್ತ ಜನವರಿ 1 ರಂದು ರಾಜ್ಯದಾದ್ಯಂತ ಸೌಹಾರ್ದ ಸಹಕಾರಿಗಳು **"ಸೌಹಾರ್ದ ಸಹಕಾರಿ ದಿನ"**ವನ್ನಾಗಿ ಆಚರಿಸಲು ಸಂಯುಕ್ತ ಸಹಕಾರಿಯು ವಿನಂತಿಸುತ್ತಿದೆ. ಈ ದಿನದಂದು ಪ್ರತಿಯೊಂದು ಸಹಕಾರಿಯ ತನ್ನ ಆವರಣದಲ್ಲಿ ಸಹಕಾರಿ ಧ್ವಜವನ್ನು ಹಾರಿಸಿ, ಸಹಕಾರಿಯ ಅಸ್ತಿತ್ವವನ್ನು ಸಾರ್ವಜನಿಕರಿಗೆ ತೋರಿಸುವಂತಹ, ಸಭೆ ಸಮಾರಂಭಗಳನ್ನು ಏರ್ಪಡಿಸಿ ಸಹಕಾರಿಯ ಸಾಧನೆಗಳನ್ನು, ಸೇವಾ ಸೌಲಭ್ಯಗಳನ್ನು ಹಾಗೂ ಮುಂದಿನ ದಿನಗಳಲ್ಲಿನ ಯೋಜನೆಗಳನ್ನು ಪ್ರಚಾರ ಮಾಡುವಂತಹ ಹಾಗೂ ಪ್ರಬಂಧ ಹಾಗೂ ಚರ್ಚಾ ಸ್ಪರ್ಧೆಗಳನ್ನು ಏರ್ಪಡಿಸುವ ಮೂಲಕ ಸಹಕಾರಿ ಕ್ಷೇತ್ರದ ಬಗ್ಗೆ ಅರಿವು ಮೂಡಿಸುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದಾಗಿದೆ ಸೌಹಾರ್ದ ಸಹಕಾರಿಯ ದಿನಾಚರಣೆ ವರದಿಯನ್ನು ಛಾಯಾಚಿತ್ರದೊಂದಿಗೆ ಸಂಯುಕ್ತ ಸಹಕಾರಿಗೆ ಕಳುಹಿಸಿಕೊಡಲು ಕೋರಿದೆ.




## ನೂತನ ಸಹಕಾರಿ ಬ್ಯಾಂಕ್ ಸ್ಥಾಪನೆ : ಕರಡು ವರದಿ ಆರ್.ಬಿ.ಐಗೆ ಸಲ್ಲಿಕೆ

ನೂತನ ಸಹಕಾರಿ ಬ್ಯಾಂಕುಗಳ ಸ್ಥಾಪನೆ ಸಲುವಾಗಿ ಶ್ರೀ ವೈ. ಎಚ್. ಮಾಲೇಗಾಂ ಅವರ ಅಧ್ಯಕ್ಷತೆಯಲ್ಲಿ ರಚಿಸಿರುವ ಸಮಿತಿ ತನ್ನ ಕರಡು ಪ್ರತಿಯನ್ನು ಆರ್.ಬಿ.ಐಗೆ ಸಲ್ಲಿಸಿದೆ. ಈ ಕುರಿತಂತೆ ದಿನಾಂಕ 04.12.2011 ರಂದು ನಾಗಪುರದಲ್ಲಿ ಒಂದು ದಿನದ ಚರ್ಚಾಗೋಷ್ಠಿಯನ್ನು ಏರ್ಪಡಿಸಲಾಗಿತ್ತು. ಸಂಯುಕ್ತ ಸಹಕಾರಿಯ ಉಪಾಧ್ಯಾಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ್ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್ ಈ ಸಭೆಯಲ್ಲಿ ಭಾಗವಹಿಸಿದ್ದರು.

ರಾಜ್ಯದ ಸಹಕಾರಿಗಳು ಸಹಕಾರಿ ಬ್ಯಾಂಕೊಂದನ್ನು ಸ್ಥಾಪಿಸಲು ಆಪೇಕ್ಷಿಸಿದಲ್ಲಿ ಆ ಕುರಿತಂತೆ ಮಾರ್ಗದರ್ಶನ ನೀಡಲು ಒಂದು ದಿನದ ಕಾರ್ಯಗಾರ ನಡೆಸಲು ಸಂಯುಕ್ತ ಸಹಕಾರಿ ಯೋಜಿಸಿದೆ. ಈ ಕುರಿತ ಹೆಚ್ಚಿನ ಮಾಹಿತಿಗೆ ಸಂಯುಕ್ತ ಸಹಕಾರಿಯನ್ನು ಸಂಪರ್ಕಿಸಿ.



# ಸೌಹಾರ್ದ ಸಹಕಾರಿಗಳಲ್ಲಿ ವರ್ತಕ ಧರ್ಮ

**ಎಚ್. ಶಿವಕುಮಾರ್**
ಚಾರ್ಟೆಡ್ ಅಕೌಂಟೆಂಟ್
shivakumar.h@icai.org

**ಧರಣಿಯ ಮೇಲೊಂದು ಹಿರಿದಪ್ಪ ಅಂಗಡಿಯನಿಕ್ಕಿ**
**ರಹದ ಕುಳ್ಳಿರ್ದ ನಮ್ಮ ಮಹದೇವಸೆಟ್ಟಿ**
**ಒಮ್ಮನವಾದರೆ ಒಡನೆ ನುಡಿವನು;**
**ಇಮ್ಮನವಾದರೆ ನುಡಿಯನು;**
**ಕಾಣಿಯ ಸೋಲ, ಅಡ್ಡಿಗಾಣಿಯ ಗೆಲ್ಲ!**
**ಜಾಣ ನೋಡವ್ವಾ ನಮ್ಮ ಕೂಡಲಸಂಗಮದೇವಾ!**

ಬಸವಣ್ಣನವರ ಆಧ್ಯಾತ್ಮಿಕ ದೃಷ್ಟಿಯಲ್ಲಿ ಭಗವಂತ ಈ ಭೂಮಿಯ ಮೇಲೆ ದೊಡ್ಡ ಅಂಗಡಿಯನ್ನು ಇಟ್ಟುಕೊಂಡು ವ್ಯಾಪಾರದಲ್ಲಿ ನಿರತನಾಗಿರುವ ವರ್ತಕ. ಆತನ ವ್ಯಾಪಾರಿ ದೃಷ್ಟಿಕೋನ ಹೇಗಿದೆ ಎಂದರೆ ಗ್ರಾಹಕರೊಂದಿಗೆ ತನ್ನ ವ್ಯವಹಾರ ಕುದುರಿಸಿದರೆ ಕೂಡಲೇ ಮಾತನಾಡಿ ಮುಗಿಸುವನು. ಗ್ರಾಹಕರದು ಒಂದು ಬೆಲೆ, ಈತನದೊಂದು ಬೆಲೆಯಾಗಿ ವ್ಯತ್ಯಾಸವಾದಲ್ಲಿ ಮಾತನಾಡುವುದೇ ಇಲ್ಲ. ವ್ಯವಹಾರ ಆಗುವುದೇ ಇಲ್ಲ. ವರ್ತಕ ಒಂದು ದುಗ್ಗಾಣಿಯನ್ನು ವ್ಯಾಪಾರದಲ್ಲಿ ಕಳೆದುಕೊಳ್ಳುವವನಲ್ಲ ಮತ್ತು ಅಡ್ಡದಾರಿಯಲ್ಲಿ ಹೋಗಿ ಹೆಚ್ಚು ಲಾಭವನ್ನು ಕೂಡ ಬಯಸುವವನಲ್ಲ. ಇದು ಜಾಣ ವರ್ತಕ ಧರ್ಮ.

ಲೌಕಿಕ ಅರ್ಥದಲ್ಲಿ ವರ್ತಕ ಧರ್ಮ ಎಂದರೆ ಎಂತಹುದು? ಹತ್ತು ರೂಪಾಯಿಗೆ ಕೊಂಡ ವಸ್ತುವನ್ನು ಹನ್ನೆರಡು ರೂಪಾಯಿಗೆ ಮಾರುವುದು. ಆದರೆ ಅದೇ ಹತ್ತು ರೂಪಾಯಿಗೆ ಕೊಂಡ ವಸ್ತುವನ್ನು ಹೆಚ್ಚಿನ ಬೆಲೆಗೆ ಅಂದರೆ ಇಪ್ಪತ್ತು ರೂಪಾಯಿಗೆ ಮಾರಿದರೆ ಹೆಚ್ಚುವರಿ ಹತ್ತು ರೂಪಾಯಿಗಳನ್ನು ಲಾಭಕೋರತನ ಅಥವಾ ವಂಚನೆ ಎಂಬ ಹೆಸರಿಂದ ಕರೆಯಲಾಗುತ್ತದೆ. ಎಲ್ಲಿಯವರೆಗೆ ಲಾಭದ ಹೊರೆ ಗ್ರಾಹಕರ ಮೇಲ ಹಗುರವಾಗಿರುತ್ತದೆಯೇ ಅಲ್ಲಿಯವರೆಗೆ ವಾಣಿಜ್ಯ ಲೋಕ ಅದನ್ನು ಹೊರುತ್ತದೆ. ಹೊರೆ ಅಧಿಕವಾದಾಗ ಪ್ರತಿಭಟಿಸುತ್ತದೆ. ಇದು ವರ್ತಕ ಧರ್ಮದ ಮೂಲ ದ್ರವ್ಯ. ಇದನ್ನೇ ಸ್ವತಃ ಅರ್ಥಶಾಸ್ತ್ರಜ್ಞರಾಗಿದ್ದ ಬಸವಣ್ಣ **"ಕಾಣಿಯ ಸೋಲ, ಅಡ್ಡಗಾಣಿಯ ಗೆಲ್ಲ"** ಎಂದು ಹೇಳಿದ್ದು.

ವರ್ತಕ ಧರ್ಮಕ್ಕೆ ಸಹಕಾರ ಕ್ಷೇತ್ರವೇನೂ ಹೊರತಲ್ಲ. ಸಹಕಾರ ಚಳುವಳಿಯು ಸದಸ್ಯರ ಪರಸ್ಪರ ಪೂರಕ ಒಳಿತಿಗಾಗಿ ಕೆಲಸ ಮಾಡುವ ವೇದಿಕೆಯಾದರೂ ಲಾಭ ದೃಷ್ಟಿಯಿಂದ ವಿಚಲಿತವಾಗುವುದು ಔಚಿತ್ಯವಾಗಲಾರದು. "ಸಹಕಾರ ಪದ್ಧತಿಯು ಮೂಲ ಮಂತ್ರ ಒಗ್ಗಟ್ಟು. ಇಲ್ಲಿ ಬಡವ ಬಲ್ಲಿದರೆಂಬ ಭೇದವಿಲ್ಲ. ಒಬ್ಬನಿಗಾಗಿ ಎಲ್ಲರೂ, ಎಲ್ಲರಿಗಾಗಿ ಪ್ರತಿಯೊಬ್ಬನೂ ಶ್ರಮಪಟ್ಟು ದುಡಿಯುವುದೇ ಈ ಪದ್ಧತಿಯ ಮೂಲೋದ್ದೇಶ. ಬಂಡವಾಳವನ್ನ ಎಲ್ಲರ ಹಿತಕ್ಕಾಗಿ ವಿನಿಯೋಗಿಸುವುದು ಸಹಕಾರ ಮಾರ್ಗ. ಈ ಉದ್ದೇಶವನ್ನು ಕಾರ್ಯಗತಗೊಳಿಸಲು ಅನೇಕ ಸಹಕಾರಿ ಸಂಘಗಳು ಸ್ಥಾಪಿತವಾಗಿವೆ. ಈ ಸಂಸ್ಥೆಗಳ ಆಡಳಿತವನ್ನು ಆಯಾ ಸಂಸ್ಥೆಗಳ ಸದಸ್ಯರೇ ನಡೆಸುತ್ತಾರೆ. ಧಣಿಗಳು ಸದಸ್ಯರೇ, ದುಡಿಯುವವರು ಅವರೇ. ಲಾಭ ಬಂದರೂ ಅವರಿಗೆ, ನಷ್ಟವಿದ್ದರೂ ಅವರಿಗೆ". ಹೀಗೆ " ಜ್ಞಾನಗಂಗೋತ್ರಿ"ಯ ಸಂಪುಟದಲ್ಲಿ ಸಹಕಾರ ಎಂಬ ಪದದ ಅರ್ಥವನ್ನು ವ್ಯಾಖ್ಯಾನಿಸಲಾಗಿದೆ. ಇದೇ ಕಾರಣಕ್ಕಾಗಿಯೇ ಸಂಯುಕ್ತ ಸಹಕಾರಿಯು ನಷ್ಟದಲ್ಲಿರುವ ಸೌಹಾರ್ದ ಸಹಕಾರಿಗಳನ್ನು ನಿರ್ವಹಿಸುವುದು ಹೇಗೆ ಮತ್ತು



ಲಾಭ ಮಾರ್ಗಕ್ಕೆ ಮರಳಿ ತರುವ ಬಗ್ಗೆ ಏನು ಎಂಬ ಉದ್ದೇಶವನ್ನಿಟ್ಟುಕೊಂಡು ಹಲವಾರು ವಿಚಾರ ಸಂಕಿರಣಗಳನ್ನು ನಡೆಸುತ್ತಾ ಬಂದಿದೆ. ನಷ್ಟದ ಹಾದಿ ಹಿಡಿಯುತ್ತಿರುವ ಸೌಹಾರ್ದ ಸಹಕಾರಿ ಸಂಘಗಳನ್ನು ಆರಂಭದ ಹಂತದಲ್ಲೇ ಗುರುತಿಸಿ ಸೂಕ್ತವಾದ ಚಿಕಿತ್ಸಕ ದೃಷ್ಟಿಕೋನದಲ್ಲಿ ವಸ್ತುಸ್ಥಿತಿಯನ್ನ ಗಮನಿಸಿ ತಜ್ಞರಿಂದ ಮಾರ್ಗದರ್ಶನ ಪಡೆದು ಅಗತ್ಯ ಕ್ರಮವನ್ನ ಅನುಷ್ಠಾನಗೊಳಿಸಿದರೆ ನಷ್ಟದ ನೆರಳಿನಿಂದ ಲಾಭದ ಪ್ರಕಾಶದೆಡೆಗೆ ಹೊರಳುವ ಸಾಧ್ಯತೆಗಳಿರುತ್ತದೆ.

ಸೌಹಾರ್ದ ಸಹಕಾರಿ ಸಂಘಗಳಲ್ಲಿ ನಷ್ಟವಾಗುತ್ತಿರುವ ಬಗ್ಗೆ ಅಧ್ಯಾಯನ ಮಾಡಿ ಸೂಕ್ತ ಕ್ರಮಗಳನ್ನು ಕೈಗೊಳ್ಳಲು ಲೆಕ್ಕಪತ್ರಗಳ ನಿರ್ವಾಹಣೆ, ಆಡಳಿತ ಮಹತ್ವದ ಪಾತ್ರವನ್ನು ವಹಿಸುತ್ತದೆ. ನಷ್ಟದ ಹಾದಿ ಹಿಡಿಯುತ್ತಿರುವ ಸೌಹಾರ್ದ ಸಹಕಾರಿ ಸಂಘಗಳು ಲೆಕ್ಕಪತ್ರಗಳ ನಿರ್ವಾಹಣೆಯನ್ನು ನಿರ್ಲಕ್ಷಿಸುವುದು ಮೇಲಿಂದ ಮೇಲೆ ಕಂಡುಬರುತ್ತದೆ. ಸಂಘವೊಂದು ನಷ್ಟದಲ್ಲಿದೆ ಅಥವಾ ನಷ್ಟದ ಹಾದಿಯಲ್ಲಿದೆ ಎಂಬ ಸೂಚನೆ ಕಂಡು ಬಂದ ಕೂಡಲೇ ಆಡಳಿತ ಮಂಡಳಿಯವರು ಲೆಕ್ಕ ಪತ್ರಗಳನ್ನು ಅಂದಿಗಂದಿಗೆ ಸರಿಪಡಿಸಿಟ್ಟುಕೊಳ್ಳುವುದನ್ನು ನಿರ್ಲಕ್ಷಿಸುವುದರ ಮೂಲಕ ಭಾರೀ ಬೆಲೆ ತೆರಬೇಕಾಗುತ್ತದೆ. ಲೆಕ್ಕಪತ್ರಗಳು ಅಂದಿನ ನೈಜ ಚಿತ್ರಣವನ್ನು ತೋರಿಸುವ ಸ್ಥಿತಿಯಲ್ಲಿದ್ದರೆ, ಅದು ಅತ್ಯಂತ ಕಹಿ ಪ್ರಸಂಗವಾಗಿದ್ದರೂ ಸರಿ, ನಿಯಂತ್ರಕ ಕ್ರಮಗಳನ್ನ ಸಮಾಲೋಚಿಸಲು ಅವಕಾಶವಾಗುತ್ತದೆ. ಮುಂದೆ ಸಾಗಬೇಕಾದ ದಾರಿ ಗೋಚರವಾಗತೊಡಗುತ್ತದೆ. ಇಲ್ಲವಾದ್ದಲ್ಲಿ ಸಂಪೂರ್ಣ ಕತ್ತಲೆ ಕವಿದಂತಾಗಿ ಸಂಸ್ಥೆಯು ಅಸ್ಥಿತ್ವಕ್ಕೆ ಸಂಚಕಾರ ಬರುವಂತಾಗುತ್ತದೆ.

ಮತ್ತೆ ಬಸವಣ್ಣನವರ ವಚನವನ್ನೇ ಪರಾಮರ್ಶಿಸುವುದಾದರೆ, "ಒಮ್ಮನವಾದರೆ ಒಡನೆ ನುಡಿವನು, ಇಮ್ಮನವಾದರೆ ನುಡಿಯನು" ಎಂಬಲ್ಲಿ ಈ ಒಮ್ಮನ ಮತ್ತು ಇಮ್ಮನಗಳ ಅರ್ಥವೇನು? ಒಮ್ಮನವಾಗಿದೆ ಅಥವಾ ಇಮ್ಮನವಾಗಿದೆ ಎಂದು ಹೇಗೆ ನಿಶ್ಚಯಿಸುವುದು? ವ್ಯಾಪಾರದಲ್ಲಿ ಒಮ್ಮನವಾಗಿದೆ ಎಂದರೆ ಕೊಡುವವನಿಗೆ ಲಾಭ, ಕೊಳ್ಳುವವನಿಗೆ ಗ್ರಾಹ್ಯವಾಗಿದೆ ಎಂದರ್ಥ. ಇಲ್ಲವಾದಲ್ಲಿ ಇಮ್ಮನವಾಗಿದೆ! ಮಾರುವವನಿಗೆ ಗಿಟ್ಟುವುದಿಲ್ಲ, ಕೊಳ್ಳುವವನಿಗೆ ತುಟ್ಟಿಯಾಗುತ್ತದೆ. ವ್ಯವಹಾರ ಸಂಭವಿಸುವುದಿಲ್ಲ. ಸೌಹಾರ್ದ ಸಹಕಾರಗಳಲ್ಲೂ ಸಹ ವ್ಯವಹಾರಗಳು ಒಮ್ಮನದಿಂದ ನಡೆಯಬೇಕು. ಆಗ ಮಾತ್ರ ಸದಸ್ಯರಲ್ಲಿ ಒಮ್ಮತ ಮೂಡುತ್ತದೆ. ಸಂಸ್ಥೆಗಳು ಲಾಭದಾಯಕವಾಗುತ್ತವೆ. ನಷ್ಟದ ನಿಯಂತ್ರಣ ಮತ್ತು ಲಾಭಾಂಶದ ಹತೋಟಿ ಇವೆರಡರ ಮಧ್ಯೆ ಸೂಕ್ತ ಸಮತೋಲನವನ್ನು ಇರಿಸಿಕೊಂಡಲ್ಲಿ ಎಲ್ಲ ಸಹಕಾರಿ ಸಂಘಗಳೂ ಕನಿಷ್ಟ ಆರ್ಥಿಕ ಅನುಕೂಲತೆಯಲ್ಲಿ ಮುನ್ನಡೆಯಬಹುದು. ಇದಕ್ಕೆ ಆಡಳಿತ ಮಂಡಳಿಗೆ ಮುಂದಾಲೋಚನೆ, ತಜ್ಞರ ಸಲಹೆ, ಸಮದರ್ಶಿ ಪ್ರಜ್ಞೆ, ಸಾಮಾಜಿಕ ಜವಾಬ್ದಾರಿ ಇರಬೇಕಾಗುತ್ತದೆ. ಇಲ್ಲವಾದಲ್ಲಿ ಕೇವಲ ವೈಯಕ್ತಿಕ ಪ್ರತಿಷ್ಟೆ, ಅದ್ದೂರಿತನ, ಅಸಮರ್ಪಕ ಸ್ಪರ್ಧೆ, ನಿರಂತರವಾದ ಸಾಲ ಸಂಸ್ಕಾರ ಇವುಗಳನ್ನೇ ನೀತಿ–ನಿಯಮಗಳೆಂದು ರೂಢಿಸಿಕೊಂಡಲ್ಲಿ ನಮ್ಮ ಕಣ್ಣಮುಂದೆಯೇ ಧರೆಗಳಿದು ಹೋಗಿರುವ ವಿಮಾನಯಾನ ಕಂಪನಿಗಳಾದ ಏರ್ ಇಂಡಿಯಾ, ಕಿಂಗ್‌ಫಿಷರ್‌ನಂತಹ ಉದಾಹರಣೆಗಳ ಸಾಲಿಗೆ ಸಹಕಾರಿ ಸಂಘ–ಸಂಸ್ಥೆಗಳು ಬಂದು ನಿಲ್ಲುವಂತಹ ಸಂಭವವಿರುತ್ತದೆ. ಕಿಂಗ್‌ಫಿಷರ್‌ನಂತಹ ಕಂಪನಿಗಳು ಸೇವೆಗಳನ್ನು ರದ್ದುಗೋಳಿಸಿ, ಸಾಲಭಾರದ ನೆಪದಲ್ಲಿ ಜನಸಾಮಾನ್ಯರನ್ನ ಪೀಡಿಸಿದ ಘಟನೆ ನೆನಪಿರುವ ಈ ಸಂಧರ್ಭದಲ್ಲಿ ಸೌಹಾರ್ದ ಸಹಕಾರಿಗಳು ಹೀಗಾಗದಂತೆ ತಡೆಯಲು ಮತ್ತಷ್ಟು ತರಬೇತಿಗಳು, ವಿಚಾರ ಸಂಕಿರಣಗಳು ಅಗತ್ಯ.

■

## 58ನೇ ಅಖಿಲ ಭಾರತ ಸೌಹಾರ್ದ ಸಹಕಾರಿ ಸಪ್ತಾಹ ಆಚರಣೆ :

# ಕದಂಬ ಮಾರ್ಕೆಟಿಂಗ್ ಸೌಹಾರ್ದ ಸಹಕಾರಿ ಶಿರಸಿ ಇವರಿಗೆ ಶ್ರೇಷ್ಠ ಸಹಕಾರಿಯ ಪ್ರಶಸ್ತಿ



**ಒಂದು** ವಿಶಿಷ್ಟವಾದ ವೈಚಾರಿಕ ಹಿನ್ನಲೆಯೊಡನೆ ಉತ್ತರ ಕನ್ನಡದಲ್ಲಿ ಕದಂಬ ಮಾರ್ಕೆಟಿಂಗ್ ಸೌಹಾರ್ದ ಸಹಕಾರಿಯು 2004ರಲ್ಲಿ ಆರಂಭವಾಯಿತು. ಉತ್ತರ ಕನ್ನಡ ಜಿಲ್ಲೆಯ ವೈಶಿಷ್ಟ್ಯಪೂರ್ಣ ಆರ್ಥಿಕ ಹಾಗೂ ಪ್ರಾಕೃತಿಕ ಸಂಪನ್ಮೂಲವು ಈ ಸಂಸ್ಥೆಯ ಹುಟ್ಟಿಗೆ ಕಾರಣವಾಯಿತು. ಉತ್ತರ ಕನ್ನಡ ಜಿಲ್ಲೆಯಲ್ಲಿ ಅಡಿಕೆ, ಸಾಂಬಾರ ಬೆಳೆಗಳು, ಕೊಕ್ಕೋ, ಭತ್ತ, ತೆಂಗು ಹಾಗೂ ಹಣ್ಣು-ಹಂಪಲು ಇವು ಪ್ರಮುಖ ಬೆಳೆಗಳಾಗಿದ್ದು, ಉಪ್ಪಾಗೆ, ಮುರುಗಲು, ಶೀಗೆಕಾಯಿ, ಹಲಸು, ಅಂಟವಾಳ, ಗೋಡಂಬಿ ಮುಂತಾದ ಅನೇಕ ಅರಣ್ಯ/ ಖುಷ್ಕಿ ಬೆಳೆಗಳಿವೆ. ಇದಲ್ಲದೆ ಈರುಳ್ಳಿ, ಕಲ್ಲಂಗಡಿ, ಮಲ್ಲಿಗೆ ಹೂ, ಅನಾನಸು ಮುಂತಾದ ಬೆಳೆಗಳನ್ನೂ ಸಹ ಇಲ್ಲಿ ಬೆಳೆಯಲಾಗುತ್ತದೆ. ಹಾಗೆಯೇ, ಆರ್ಕಿಡ್, ಗ್ಲಾಡಿಯೋಲಸ್‌ನಂತಹ ಪುಷ್ಪ ಬೆಳೆಗಳು, ಪಚೌಲಿ, ವೆನಿಲ್ಲಾದಂಥ ಸುಗಂಧ ದ್ರವ್ಯದ ಬೆಳೆಗಳೂ ಈಗಾಗಲೇ ಜಿಲ್ಲೆಯಲ್ಲಿ ಬೇರು ಬಿಡಲಾರಂಭಿಸಿವೆ. ಆದರೆ, ಅಡಿಕೆ, ಏಲಕ್ಕಿ, ಕಾಳುಮೆಣಸುಗಳನ್ನು ಬಿಟ್ಟು ಉಳಿದ ಯಾವ ಬೆಳೆಗಳಿಗೂ ಸಹಕಾರಿ ರಂಗದಲ್ಲಿ ಇನ್ನೂ ಪ್ರವೇಶ ಸಿಕ್ಕಿಲ್ಲ. ಹಾಗೆ ನೋಡಿದರೆ ಇಲ್ಲಿ ಸಹಕಾರಿ ಚಳುವಳಿ ಸಾಕಷ್ಟು ಪ್ರಬಲವಾಗಿಯೇ ಇದೆ. ಆದರೆ ಅದು ಅಡಿಕೆ, ಯಾಲಕ್ಕಿ, ಕಾಳುಮೆಣಸುಗಳಿಗಷ್ಟೇ ಸೀಮಿತವಾಗಿದೆ. ಉಳಿದ ಎಲ್ಲ ಬೆಳೆಗಳಿಗೂ ಖಾಸಗಿ ವ್ಯಾಪಾರಸ್ಥರ ಮರ್ಜಿ ಕಾಯುವುದು ಅನಿವಾರ್ಯವಾಗಿದೆ. ಹೀಗಾಗಿ ಬೆಳೆಗಳ ದರದಲ್ಲಿ ಏರಿಳಿತವು, ಕೆಲವೊಮ್ಮೆ ಕೊಳ್ಳುವವರೇ ಇಲ್ಲದ ಪರಿಸ್ಥಿತಿ, ಖರೀದಿದಾರರನ್ನು ಹುಡುಕಿಕೊಂಡು ಹೋಗುವ ದುರ್ಭರತೆ ಇಲ್ಲಿನ ರೈತರನ್ನು ಕಾಡುತ್ತಿತ್ತು. ವೆನಿಲ್ಲಾ ಬೆಳೆಯ ಏರಿಳಿತವಂತೂ ಒಂದು ಅತ್ಯಂತ ವಿಚಿತ್ರವಾದ, ರೈತರು ಕಂಡು, ಕೇಳರಿಯದ ಅನುಭವವಾಗಿದೆ. ಒಂದು ಕಿಲೋಗೆ 250/- ರೂ. ನಿಂದ ಒಮ್ಮೆಲೆ 3,500/- ರೂ. ಗೆ ಏರಿ ಮತ್ತೆ 60/- ರೂ. ನಷ್ಟು ಕೆಳಗೆ ಕುಸಿದ ಉದಾಹರಣೆ ಇನ್ನೊಂದು ಬೆಳೆಯಲ್ಲಿ ಇರಲಿಕ್ಕಿಲ್ಲ.

ಆದ್ದರಿಂದ, ರೈತರು ಬೆಳೆಯುವ ಎಲ್ಲಾ ಬೆಳೆಗಳಿಗೂ ಸಂಘಟಿತವಾದ ಸಹಕಾರಿ ರಂಗದಡಿ ಮಾರುಕಟ್ಟೆಯನ್ನೊದಗಿಸುವುದು, ಮಾರುಕಟ್ಟೆಯ ಅವಶ್ಯಕತೆಗಳಿಗನುಗುಣವಾಗಿ ಅದನ್ನು ಸಂಸ್ಕರಿಸುವುದು, ಪ್ಯಾಕಿಂಗ್ ಮಾಡುವುದು, ಬ್ರಾಂಡ್ ನೇಮ್ ಅನ್ನು ಮಾರುಕಟ್ಟೆಯಲ್ಲಿ ಸ್ಥಾಪಿಸುವುದು ಇವೆಲ್ಲ ಪ್ರಯತ್ನಗಳು ಅನಿವಾರ್ಯವಾಗಿದ್ದವು.

ಈ ಉದ್ದೇಶಗಳನ್ನೆಲ್ಲಾ ಸಾಕಾರಗೊಳಿಸಲು ಕದಂಬ ಮಾರ್ಕೆಟಿಂಗ್ ಸೌಹಾರ್ದ ಸಹಕಾರಿಯು ಶಿರಸಿಯಲ್ಲಿ ಆರಂಭವಾಯಿತು. ನಾಲ್ಕು ವರ್ಷಗಳ ಹಿಂದೆ ಪರಮ ಪೂಜ್ಯ ಶ್ರೀಮದ್ ಗಂಗಾಧರೇಂದ್ರ ಸರಸ್ವತಿ ಮಹಾಸ್ವಾಮಿಗಳ ದಿವ್ಯ ಆಶೀರ್ವಾದಗಳೊಂದಿಗೆ ಆರಂಭವಾದ ಈ ಸಂಸ್ಥೆ ಇಂದು ಜಿಲ್ಲೆಯ ರೈತರ ಬದುಕಿನ ಒಂದು ಭಾಗವಾಗಿ, ಭದ್ರವಾಗಿ ಬೇರೂರಿ ಹೆಮ್ಮರವಾಗಿ ಬೆಳೆಯುತ್ತಿದೆ.

'ಯಾವುದೇ ಬೆಳೆಗೆ ಎಲ್ಲೂ ಗಿರಾಕಿಯಿಲ್ಲದಿದ್ದರೂ ಕದಂಬ ಮಾರ್ಕೆಟಿಂಗ್ ನಲ್ಲಂತೂಮಾರಬಹುದು' ಎಂದು ರೈತರು ನಿರಾಳವಾಗಿ ಉಸಿರಾಡುವ ವಾತಾವರಣವನ್ನು, ಸದವಕಾಶವನ್ನು ಸಹಕಾರಿಯು ನಿರ್ಮಿಸುವಲ್ಲಿ ಯಶಸ್ವಿಯಾಗಿದೆ.

# ಸ್ವ ಸಾಮರ್ಥ್ಯ ಹಾಗೂ ನಂಬಿಕೆ. (ಒಂದು ದೃಷ್ಟಾಂತ)

ಒಂದು ಜೇನುಗೂಡು, ಅದಲ್ಲಿಯ ಜೇನು ಕದಿಯಲು ಕೆಲವು ತುಂಟರು ಜೇನುಗೂಡಿಗೆ ಬೆಂಕಿ ಇಡುತ್ತಾರೆ. ಜೇನು ನೊಣಗಳೆಲ್ಲ ಹಾರಿಹೋಗುತ್ತವೆ. ಹೀಗೆ ಹಾರಿ ಹೋದ ಜೇನುನೋಣಗಳಲ್ಲಿ ಒಂದು ಜೇನುನೊಣ ಒಂದು ಮರದ ಕಿತ್ತುಹೋಗುವ ಒಂದು ರೆಂಬೆಯಲ್ಲಿ ಬಂದು ಕುಳಿತು ಕೊಳ್ಳುತ್ತದೆ. ಅಲ್ಲಿ ಒಂದು ಪಕ್ಷಿ ಇರುತ್ತದೆ. ಆ ಪಕ್ಷಿಯು ಜೇನುನೊಣವನ್ನು ಕೇಳುತ್ತದೆ. ನೀನು ನಿನ್ನಗೂಡಿನಿಂದ ಹಾರಿ ಬಂದೆಯಲ್ಲ ಮುಂದೇನು ಮಡುವೆ, ಆಗ ಜೇನುನೊಣ, "ಆ ತುಂಟರು ನನ್ನ ಗೂಡಿಗೆ ಬೆಂಕಿ ಇಟ್ಟಿದ್ದಾರೆ. ಆದರೆ ನಾನು ಕೊಡುವ ಜೇನಿನ ಸಾಮರ್ಥ್ಯಕ್ಕಲ್ಲ. ಮತ್ತೆ ಗೂಡು ಕಟ್ಟುತ್ತೇನೆ. ಆ ಸಾಮರ್ಥ್ಯ ನನ್ನಲ್ಲಿದೆ"ಎಂದು ಹೇಳುತ್ತದೆ.



ಅದೇ ಜೇನು ನೊಣ ಆ ರೆಂಬೆಯಲ್ಲಿ ಕುಳಿತಿರುವ ಪಕ್ಷಿಯನ್ನು ಕೇಳುತ್ತದೆ. "ಇದೇನು, ನೀನು ಈ ಕಿತ್ತು ಹೋಗುವ ರೆಂಬೆಯ ಮೇಲೆ ಕುಳಿತಿರುವೆ. ಈ ರೆಂಬೆಯು ಮುರಿದು ಹೋದರೆ ನಿನ್ನಗತಿ ಏನು?". ಆಗ ಆ ಪಕ್ಷಿ ಹೇಳುತ್ತದೆ, "ನಾನು ಈ ರೆಂಬೆಯನ್ನು ನಂಬಿಕೊಂಡು ಇಲ್ಲಿ ಕುಳಿತಿಲ್ಲ. ನನ್ನ ರೆಕ್ಕೆಗಳಲ್ಲಿ ಹಾರುವ ಸಾಮರ್ಥ್ಯಇದೆ. ಅದರಲ್ಲಿ ನನಗೆ ನಂಬಿಕೆ ಇದೆ. ರೆಂಬೆ ಮುರಿದರೆ ನಾನು ಹಾರಿಗೋಗಬಲ್ಲೆ"ಎಂದು ಹೇಳುತ್ತದೆ.

ಈ ಜೇನುನೊಣ ಹಾಗೂ ಪಕ್ಷಿಗಳ ಸಂವಾದ ಮಾನವನ ಬದುಕಿಗೆ ಒಂದು ಸಂದೇಶವಲ್ಲವೆ? ನಮ್ಮಲ್ಲಿರುವ ಸಾಮರ್ಥ್ಯದ ಬಗ್ಗೆ ನಮಗೆ ನಂಬಿಕೆಯಿದ್ದರೆ ಜೀವನವನ್ನು ಧೈರ್ಯವಾಗಿ ಸಾಗಿಸಬಹುದಾಗಿದೆ. ಯಾವ ಆತಂಕಗಳಿಲ್ಲದೆ ಜೀವನ ನಡೆಸಬಹುದು.

**– ವಸಂತ, ಪುತ್ತೂರು.**

### 58ನೇ ಅಖಿಲ ಭಾರತ ಸೌಹಾರ್ದ ಸಹಕಾರಿ ಸಪ್ತಾಹ ಆಚರಣೆ :

# ಶ್ರೀ ಭ್ರಮರಾಂಬ ಪತ್ತಿನ ಸೌಹಾರ್ದ ಸಹಕಾರಿ ನಿ., ಮಸ್ಕಿ ಇವರಿಗೆ ಶ್ರೇಷ್ಠ ಸಹಕಾರಿ ಪ್ರಶಸ್ತಿ




ಸಹಕಾರ ಸಪ್ತಾಹ ಆಚರಣೆ ಅಂಗವಾಗಿ ಸಹಕಾರ ಕ್ಷೇತ್ರದಲ್ಲಿ ಯಶಸ್ಸು ಗಳಿಸಿರುವ ರಾಜ್ಯದ ಸಹಕಾರಿ ಸಂಸ್ಥೆಗಳಿಗೆ ಪ್ರತಿ ವರ್ಷ "ಅತ್ಯುತ್ತಮ ಸಹಕಾರಿ" ಪ್ರಶಸ್ತಿ ನೀಡಿ ಗೌರವಿಸುತ್ತಾ ಬಂದಿದ್ದಾರೆ. ಸಹಕಾರ ಕ್ಷೇತ್ರದಲ್ಲಿ ನಮ್ಮ ಸಹಕಾರಿಯು ಗ್ರಾಹಕರಿಗೆ ನೀಡಿದ 11 ವರ್ಷದ ಸೇವೆಯನ್ನು ಪರಿಗಣಿಸಿ ದಿನಾಂಕ: 17.11.2011 ರಂದು ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿ ನಡೆದ "58 ನೇ ಅಖಿಲ ಭಾರತ ಸಹಕಾರ ಸಪ್ತಾಹ" ಕಾರ್ಯಕ್ರಮದಲ್ಲಿ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಎಚ್. ಕೆ.ಪಾಟೀಲ್ ಮತ್ತು ಶ್ರೀ ಬಿ.ಜಿ. ಬಣಕಾರ ಮಾಜಿ ಸಭಾಪತಿ ಅವರು ಶ್ರೀಭ್ರಮರಾಂಬ ಪತ್ತಿನ ಸೌಹಾರ್ದಸಹಕಾರಿ ಮಸ್ಕಿ ಹಾಗೂ ಕದಂಬ ಮಾರ್ಕೆಟಿಂಗ್ ಸೌಹಾರ್ದ ಸಹಕಾರಿಗಳಿಗೆ" ಅತ್ಯುತ್ತಮ ಸಹಕಾರಿ–2011" ಪ್ರಶಸ್ತಿ ನೀಡಿಗೌರವಿಸಿದ್ದಾರೆ. ಈ ಕಾರ್ಯಕ್ರಮದಲ್ಲಿ ಶ್ರೀವಿಶ್ವೇಶ್ವರ ಹೆಗ್ಡೆ ಕಾಗೇರಿ, ಶಿಕ್ಷಣ ಸಚಿವರು ಮತ್ತು ಇತರ ಗಣ್ಯರು ಹಾಜರಿದ್ದರು.

"ಎಲ್ಲರೂ ಒಬ್ಬರಿಗಾಗಿ ಒಬ್ಬರು ಎಲ್ಲರಿಗಾಗಿ" ಎಂಬ ಸಹಕಾರಿ ತತ್ವದ ಮೇಲೆ ಶ್ರೀ ಭ್ರಮರಾಂಬ ಪತ್ತಿನ ಸಹಕಾರ ಸಂಘ ಮಸ್ಕಿ ಪಟ್ಟಣದಲ್ಲಿ 'ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ–1959'ರ ಅಡಿ ನೊಂದಾವಣೆಗೊಂಡು ದಿನಾಂಕ: 05.05.2000 ರಂದು ಕೇವಲ ರೂ.7ಲಕ್ಷ ಷೇರು ಬಂಡವಾಳದೊಂದಿಗೆ ಹಾಗೂ 400 ಜನ ಸದಸ್ಯರೊಂದಿಗೆ ತನ್ನ ಕಾರ್ಯ ಪ್ರಾರಂಭಿಸಿ, ನಂತರ ನೂತನವಾಗಿ ಅಸ್ತಿತ್ವಕ್ಕೆ ಬಂದ ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ಕಾಯ್ದೆ–1997ರ ಅಡಿಯಲ್ಲಿ ದಿನಾಂಕ:12.12.2001 ರಂದು ಪರಿವರ್ತನೆಗೊಂಡಿತು.

ಸಹಕಾರಿಯು ಪ್ರಾರಂಭದಲ್ಲಿ ಮಸ್ಕಿ ಮತ್ತು ಸುತ್ತ ಮುತ್ತಲಿನ ಹಳ್ಳಿಗಳಲ್ಲಿ ಸಹಕಾರಿಯ ಮಾಹಿತಿ ನೀಡಿ ಸಣ್ಣ ಪುಟ್ಟ ವ್ಯಾಪಾರಸ್ಥರನ್ನು ಸದಸ್ಯರನ್ನಾಗಿ ಮಾಡಿಕೊಂಡು ಅವಶ್ಯಕತೆಗಳಿಗನುಗುಣವಾಗಿ ಆರ್ಥಿಕ ನೆರವು ನೀಡುತ್ತಾ ಹಾಗೂ ಅವರಿಂದ ಉಳಿತಾಯದ ಮನೋಭಾವನೆ ಬೆಳೆಸಿ ಠೇವಣಿಗಳನ್ನು ಸಂಗ್ರಹಿಸುತ್ತಾ ಜನರ ವಿಶ್ವಾಸಕ್ಕೆ ಪಾತ್ರವಾಯಿತು.

ಕ್ರಮೇಣ ಸಹಕಾರಿಯು ತನ್ನ ಕಾರ್ಯಕ್ಷೇತ್ರದ ವ್ಯಾಪ್ತಿಯನ್ನು ಹೆಚ್ಚಿಸಿಕೊಂಡು 2005 ನೇ ಇಸವಿಯಲ್ಲಿ ಲಿಂಗಸೂಗೂರಿನಲ್ಲಿ ಪ್ರಥಮ ಶಾಖೆಯನ್ನು ತೆರೆದು ರಾಯಚೂರು–ಕೊಪ್ಪಳ ಜಿಲ್ಲೆಯಲ್ಲಿಯೇ ಪ್ರಪ್ರಥಮ ಶಾಖೆ ತೆರೆದ ಹೆಗ್ಗಳಿಕೆಯನ್ನು ಸಹಕಾರಿಯು ಹೊಂದಿತು. ನಂತರ 2008ರಲ್ಲಿ ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಸಹಕಾರಿಯ ವ್ಯವಹಾರ ವಿಸ್ತರಿಸಲು 2010ರಲ್ಲಿ ಮಾನ್ವಿ ತಾಲೂಕಿನ ಕವಿತಾಳ ಗ್ರಾಮದಲ್ಲಿ ಶಾಖೆಯನ್ನು ಪ್ರಾರಂಭಿಸಿತು. ಎಲ್ಲಾ ಶಾಖೆಗಳು ಉತ್ತಮ ಆರ್ಥಿಕ ಪ್ರಗತಿಯತ್ತ ಸಾಗುತ್ತಿವೆ. ಸಹಕಾರಿಯಲ್ಲಿ 9 ಜನರ ನಿರ್ದೇಶಕ ಮಂಡಳಿ ಇದ್ದು, ವಿಶೇಷವಾಗಿ 12 ಜನ ಊರಿನ ಹಿರಿಯ ಗಣ್ಯರು, ವ್ಯಾಪಾರಸ್ಥರು ಹಾಗೂ ತಜ್ಞರನ್ನು ಒಳಗೊಂಡ ಸಲಹಾ ಸಮಿತಿಯನ್ನು ರಚಿಸಿಕೊಂಡಿದೆ ಹಾಗೂ ಪ್ರತಿ ಶಾಖೆಯಲ್ಲಿಯೂ ಕೂಡ ಶಾಖೆ ಅಭಿವೃದ್ಧಿಗೊಳಿಸಲು 5–10 ಜನ ಶಾಖೆ ಸಲಹಾ ಸಮಿತಿ ನೇಮಕಗೊಂಡಿದೆ ಮತ್ತು ಎಲ್ಲಾ ಶಾಖೆಗಳನ್ನು ನಿರ್ವಹಿಸಲು ಪ್ರತ್ಯೇಕವಾಗಿ ಮುಖ್ಯಕಛೇರಿಯನ್ನು ರಚಿಸಿಕೊಂಡು ಅದಕ್ಕಾಗಿ ಪ್ರತ್ಯೇಕವಾಗಿ Software ಹೊಂದಿದೆ. ಸಹಕಾರಿಯಲ್ಲಿ ಸಿಬ್ಬಂದಿಗಳು ಹಾಗೂ ಪಿಗ್ಮಿ ಏಜೆಂಟರು ಕೂಡಿ ಒಟ್ಟು 45 ಜನ ಕಾರ್ಯನಿರ್ವಹಿಸುತ್ತಿದ್ದಾರೆ. ಸಿಬ್ಬಂದಿಗಳಿಗೆ ಆಗಾಗ ಪರಿಣಿತರೊಂದಿಗೆ ತರಬೇತಿ ಕೊಡಿಸಿ ಉತ್ತಮವಾಗಿ ಕಾರ್ಯನಿರ್ವಹಿಸಲು ಅನುಕೂಲಮಾಡಿಕೊಟ್ಟಿದೆ.

ಸಹಕಾರಿಯು ಸದಸ್ಯರ ಆರ್ಥಿಕ ಅಭಿವೃದ್ಧಿಗೆ ಶ್ರಮಿಸುತ್ತಿದ್ದು, ಸದಸ್ಯರು ಅಕಾಲಿಕವಾಗಿ ಮರಣ ಹೊಂದಿದರೆ ಸಹಕಾರಿಯ ವತಿಯಿಂದ ರೂ.5,000ಗಳನ್ನು ಅವರ ಕುಟುಂಬದವರಿಗೆ ನೀಡುವ 'ಭ್ರಮರಾಂಬ ಜೀವನಿಧಿ' ಎಂಬ ಯೋಜನೆಯನ್ನು ಸಹಕಾರಿಯು ಜಾರಿಗೆ ತಂದಿದೆ.

ಸಹಕಾರಿಯು ಬಡ್ಡಿಯೇತರ ಆದಾಯ ಹೊಂದುವ ನಿಟ್ಟಿನಲ್ಲಿ ದಕ್ಷಿಣ ಭಾರತದಲ್ಲಿಯೇ MetLife India Insurance Co. Ltd ವಿಮಾ ಕಂಪನಿ ಜೊತೆ ಹೊಂದಾಣಿಕೆ ಮಾಡಿಕೊಂಡು ವಿಮಾ ಸೌಲಭ್ಯ ಒದಗಿಸುತ್ತಿರುವ ಪ್ರಥಮ ಸಹಕಾರಿಯಾಗಿದೆ.

Axis Bank Ltd. ಸಹಯೋಗದೊಂದಿಗೆ RTGS/NEFT & ATM CARD ಸೇವೆ ಗ್ರಾಹಕರಿಗೆ ನೀಡಲಾಗುತ್ತಿದ್ದೆ. ಸಹಕಾರಿಯು ಗ್ರಾಹಕರಿಗಾಗಿ ಈಗಾಗಲೇ PAN Cardನ್ನು ಕೂಡ ನೀಡುವ ವ್ಯವಸ್ಥೆ ಮಾಡಿದೆ. ಸಹಕಾರಿಯ ಲಿಂಗಸೂಗೂರು ಮತ್ತು ಸಿರುಗುಪ್ಪ ಶಾಖೆಗಳಲ್ಲಿ ಇ–Stamping ಸೇವೆಯನ್ನು ಕೂಡ ನೀಡುತ್ತಿದೆ.



# ಹಂಪಿಯಲ್ಲಿ ಜರುಗಿದ ಸೌಹಾ
# 6ನೇ ತಂಡದ ತರ

## ವ್ಯಕ್ತಿ ಜೊತೆ ವ್ಯಕ್ತಿತ್ವದ ಬೆಳವಣಿಗೆಗೆ ನಿರಂತರ ತರಬೇತಿ ಅವಶ್ಯಕ : ಡಾ. ಮಂಜುನಾಥ ಬೇವಿನಕಟ್ಟಿ

### ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿವತಿಯಿಂದ ರಾಜ್ಯ ಮಟ್ಟದ ತರಬೇತಿ ಕಾರ್ಯಕ್ರಮ ಆರಂಭ

**ಹೊಸಪೇಟೆ:** ವ್ಯಕ್ತಿಯ ಬೆಳವಣಿಗೆಯ ಜೊತೆ ವ್ಯಕ್ತಿತ್ವದ ಬೆಳವಣಿಗೆಯು ಅವಶ್ಯಕವಾಗಿದೆ ಈ ಹಿನ್ನೆಲೆಯಲ್ಲಿ ನಿರಂತರ ತರಬೇತಿಗಳು ಅವಶ್ಯಕ ಎಂದು ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಸಚಿವ ಡಾ.ಮಂಜುನಾಥ ಬೇವಿನಕಟ್ಟಿ ಹೇಳಿದರು. ಹಂಪಿ ಕನ್ನಡ ವಿಶ್ವವಿದ್ಯಾಲಯದ ಪಂಪ ಸಭಾಂಗಣದಲ್ಲಿ ಗುರುವಾರ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ 6ನೇ ತಂಡದ ರಾಜ್ಯ ಮಟ್ಟದ10 ದಿನಗಳ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು. ಕಲಿಕೆ ಬದುಕಿನೂದ್ದಕ್ಕೂ ನಿರಂತರವಾಗಿ ನಡೆಯುವ ಸಹಜ ಪ್ರಕ್ರಿಯೆಯಾಗಿದ್ದು ನಮ್ಮ ವೃತ್ತಿ ಬದುಕಿನ ಹೊರತಾಗಿಯು ಅನೇಕ ತಿಳುವಳಿಕೆಯನ್ನು ನೀಡಲು ತರಬೇತಿ ಅವಶ್ಯಕವಾಗಿದೆ. ಈ ತರಬೇತಿ ದೈಹಿಕ ಹಾಗೂ ಮಾನಸಿಕ ಬೆಳವಣಿಗೆಗೆ ಸಹಕಾರಿಯಾಗಲಿದೆ ಎಂದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ವಿಕಾಸ ಸೌಹಾರ್ದ ಕೋ–ಆಪರೇಟಿವ್ ಬ್ಯಾಂಕ್ ಅಧ್ಯಕ್ಷರಾದ ವಿಶ್ವನಾಥ. ಚ. ಹಿರೇಮಠ ಮಾತನಾಡಿ ನಮ್ಮಲಿರುವ ಜ್ಞಾನವನ್ನು ನೋಡಿಯೇ ಸಂಸ್ಥೆ ಕೆಲಸಕ್ಕೆ ತೆಗೆದುಕೊಂಡಿದ್ದರು ಪ್ರಾಯೋಗಿಕವಾಗಿ ನಾವು ಅನುಭವಿಸುವ ತೊಂದರೆ ಅವುಗಳ ಪರಿಹಾರೋಪಾಯಗಳನ್ನು ಇಂತಹ ವೇದಿಕೆಯಲ್ಲಿ ಚರ್ಚಿಸುವ ಮೂಲಕ ಪರಿಹಾರ ಕಂಡುಕೊಳ್ಳಬಹುದು ನಮ್ಮ ಕಾರ್ಯಕ್ಷೇತ್ರದಲ್ಲಿ ಆಗುತ್ತಿರುವ ಬದಲಾವಣೆಗಳನ್ನು ತಿಳಿಯಲು ಹಾಗೂ ಹೊಸತನವನ್ನು ಕಲಿಯಲು ತರಬೇತಿ ಸಹಕಾರಿಯಾಗಲಿದೆ ಎಂದರು. ಸೌಹಾರ್ದ ಕಾಯ್ದೆ ಜಾರಿಯಾಗಿ 10 ವರ್ಷಗಳು ಸಂದ ಈ ಸಂದರ್ಭದಲ್ಲಿ ಸಂಸ್ಥೆಗಳ ನಿಯಂತ್ರಣದತ್ತ ಗಮನ ನೀಡುವಂತೆ ಸಂಯುಕ್ತ ಸಹಕಾರಿ ಸಂಸ್ಥೆಯನ್ನು ಆಗ್ರಹಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯ ವಹಿಸಿದ್ದ ಸಂಯುಕ್ತ ಸಹಕಾರಿ ಉಪಾಧ್ಯಕ್ಷ ಶ್ರೀ ಗುರುನಾಥ ಜ್ಯಾಂತೀಕರ ಮಾತನಾಡಿ ನಿರಂತರ ಕಲಿಕೆ ಮತ್ತು ನಮ್ಮ ಕ್ರಿಯಾತ್ಮಕ ತೊಡಗುವಿಕೆ ನಮ್ಮ ಕ್ಷೇತ್ರದಲ್ಲಿ ಪ್ರಗತಿ ಕಾಣಲು ಸಹಕಾರಿಯಾಗಲಿದೆ ಇಂತಹ ಕ್ರಿಯಾತ್ಮಕತೆಯನ್ನು ನೀಡುವ ಸೌಹಾರ್ದ ಸಹಕಾರಿಯ ಆಶಯದಂತೆ 6 ಹಂತದಲ್ಲಿ ತರಬೇತಿ ನೀಡಲಾಗಿದ್ದು ದೊರೆತ ಸಂಪನ್ಮೂಲವನ್ನು ಸದ್ಬಳಕೆ ಮಾಡುವ ಮೂಲಕ ಪರಿಣಿತಿ ಸಂಪಾದಿಸಲು ಸಲಹೆ ನೀಡಿದರು. ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಭಾಸ್ಕರ್ ಹೆಗಡೆ, ಶ್ರೀ ಎಲ್.ಎಸ್.ಆನಂದ, ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಪಾಟೀಲ್ ಉಪಸ್ಥಿತರಿದ್ದರು. ರಾಜ್ಯದ ವಿವಿಧ ಜಿಲ್ಲೆಗಳ ವಿವಿಧ ಸಹಕಾರಿ ಸಂಸ್ಥೆಗಳ 40ಕ್ಕೂ ಹೆಚ್ಚುಪ್ರತಿನಿಧಿಗಳು ತರಬೇತಿಯಲ್ಲಿ ಪಾಲ್ಗೊಂಡಿದ್ದರು.

ತರಬೇತಿ ಅಧಿಕಾರಿಯಾದ ಶ್ರೀ ವಿ.ಜಿ.ಖಾರಕೂನ್ ನಿರೂಪಿಸಿದರು ಕಾರ್ಯಕ್ರಮದಲ್ಲಿ ಶ್ರೀಮತಿ ಗೀತಾರವರು ಪ್ರಾರ್ಥನೆ ನೆರವೇರಿಸಿದರು. ನಿರ್ದೇಶಕರಾದ ಶ್ರೀ ಎಲ್.ಎಸ್. ಆನಂದ ಸ್ವಾಗತಿಸಿದರು ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಪಾಟೀಲ್ ಪ್ರಾಸ್ತಾವಿಕವಾಗಿ ಮಾತನಾಡಿದರು ಶ್ರೀ ವೈ. ಕುಮಾರ್‌ರವರು ವಂದಿಸಿದರು.



ತರಬೇತಿ ಕಾರ್ಯಕ್ರಮದ ನಿರೂಪಣೆ



ಹಂಪಿಯ ಉಗ್ರ ನರಸಿಂಹ ಮೂರ್ತಿಯ ಮುಂದೆ ಶಿಬಿರಾರ್ಥಿಗಳು



ಶಿಬಿರದಲ್ಲಿ ಪಾಲ್ಗೊಂಡಿದ್ದವರು



ಶಿಬಿರಾರ್ಥಿಗಳಿಗೆ ಯೋಗ ತರಬೇತಿ

# …ರ್ದ ಸಹಕಾರಿ ಸಿಬ್ಬಂದಿಗಳ …ಬೇತಿ ಕಾರ್ಯಕ್ರಮ







ಹಂಪಿಯಲ್ಲಿ ಗುರುನಾಥ ಜ್ಯಾಂತೀಕರರವರ ಪತ್ರಿಕಾಗೋಷ್ಠಿ

## ಸಹಕಾರಿ ಸಂಸ್ಥೆಗಳ ಬೆಳವಣಿಗೆಗೆ ಮಾರಕವಾದ ನೇರ ತೆರಿಗೆ ಪದ್ಧತಿ ಹಿಂಪಡೆಯಬೇಕು : ಗುರುನಾಥ ಜ್ಯಾಂತೀಕರ

**ಹೊಸಪೇಟೆ:** ಮಾರ್ಚ್ ನಂತರ ಜಾರಿಯಾಗಲಿರುವ ಮತ್ತು ಸಹಕಾರಿ ಸಂಸ್ಥೆಗಳ ಬೆಳವಣಿಗೆಗೆ ಮಾರಕವಾಗಲಿರುವ ನೇರ ತೆರಿಗೆ ಪದ್ಧತಿಯನ್ನು ಕೈಬಿಡುವಂತೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ್ ಕೇಂದ್ರ ಸರ್ಕಾರವನ್ನು ಆಗ್ರಹಿಸಿದ್ದಾರೆ.

ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಗುರುವಾರ ಸುದ್ದಿಗೋಷ್ಠಿ ನಡೆಸಿದ ಅವರು ಮೊದಲ ಹಂತವಾಗಿ ಸಹಕಾರಿ ಬ್ಯಾಂಕ್‌ಗಳಿಗೆ ಜಾರಿಗೆ ತಂದ ತೆರಿಗೆ ಪದ್ದತಿಯನ್ನು ಮುಂದಿನ ದಿನಗಳಲ್ಲಿ ಎಲ್ಲಾ ಸಹಕಾರಿ ಸಂಸ್ಥೆಗಳ ಮೇಲು ತರಲು ಕೇಂದ್ರ ಸರ್ಕಾರ ನಿರ್ಧರಿಸಿದೆ ಲೋಕಸಭೆಯಲ್ಲಿ ಈ ಮಸೂದೆಯನ್ನು ವಿರೋಧಿಸುವಂತೆ ಪ್ರತಿ ಜಿಲ್ಲೆಯಲ್ಲಿ ಸಹಕಾರಿ ಕಾರ್ಯಕರ್ತರು ಎಲ್ಲ ಸಂಸದರು ಭೇಟಿಯಾಗಿ ಒತ್ತಡ ಹೇರಲು ತೀರ್ಮಾನಿಸಲಾಗಿದೆ. ಒಂದು ವೇಳೆ ಈ ಒತ್ತಡ ಯಶಸ್ವಿಯಾಗದಿದ್ದರೆ ಬೆಂಗಳೂರಿನಲ್ಲಿ ಡಿಸೆಂಬರ್‌ನಲ್ಲಿ ರಾಜ್ಯ ಮಟ್ಟದ ಸಮಾವೇಶ ಮಾಡಿ ಲೋಕಸಭಾ ಅಧಿವೇಶನದ ವೇಳೆ ಲೋಕಸಭೆಯ ಮುಂದೆ ಧರಣಿ ನಡೆಸಲು ತಿರ್ಮಾನಿಸಲಾಗುವುದು ಎಂದರು. ಅಪೆಕ್ಸ್ ಬ್ಯಾಂಕ್ ಮಾದರಿ ಫೆಡರಲ್ ಬ್ಯಾಂಕ್ ಆರಂಭಸುವ ಪ್ರಸ್ತಾವನೆ ಸಂಯುಕ್ತ ಸಹಕಾರಿಯ ಮುಂದಿದ್ದು ಈ ಬಗ್ಗೆ ಚಿಂತನೆ ನಡೆದಿದೆ ಎಂದರು.

ಈಗಾಗಲೇ ರಾಜ್ಯದಲ್ಲಿ ಸುಮಾರ 200 ಸಂಸ್ಥೆಗಳನ್ನು ಯಶಸ್ವಿಯಾಗಿ ನಿರ್ವಹಿಸಿದ್ದು ಮುಂದಿನ ದಿನಗಳಲ್ಲಿ ಸೌಹಾರ್ದ ಕಾಯ್ದೆಯನ್ನು ಬಲಪಡಿಸುವ ಹಾಗೂ ಉತ್ತಮ ನಿರ್ವಹಣಾ ದೃಷ್ಟಿಯಿಂದ ಶಾಸನ ಬದ್ದ ನಿಯಂತ್ರಣಾ ವ್ಯವಸ್ಥೆಯನ್ನು ಜಾರಿಗೆ ತರುವುದಾಗಿ ತಿಳಿಸಿದರು. ಇ-ಸ್ಟ್ಯಾಂಪಿಂಗ್ ಸೇವೆಯ ಪರಿಣಾಮಕಾರಿ ಅನುಷ್ಠಾನದ ನಂತರ ಕಂದಾಯ ಇಲಾಖೆಯ ಇತರೆ ಸೇವೆಗಳನ್ನು ಸೌಹಾರ್ದ ಸಹಕಾರಿಗೆ ನೀಡಿದ್ದಾದರೆ ಅನುಷ್ಠಾನಗೊಳಿಸುವುದಾಗಿ ತಿಳಿಸಿದರು. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕ ಎಲ್.ಎಸ್.ಆನಂದ್, ವ್ಯವಸ್ಥಾಪಕ ನಿರ್ದೇಶಕ ಶರಣಗೌಡ ಪಾಟೀಲ್, ಉಪ ಪ್ರಧಾನ ವ್ಯವಸ್ಥಾಪಕ ವೈ ಕುಮಾರ ಸೇರಿದಂತೆ ಅಧಿಕಾರಿಗಳು ಹಾಜರಿದ್ದರು.



ಹಂಪಿಯ ವಿರೂಪಾಕ್ಷ ದೇವಾಲಯದ ಮುಂದೆ ಶಿಬಿರಾರ್ಥಿಗಳು



ಶಿಬಿರಾರ್ಥಿಗಳಿಗೆ ಚಿಂತನ ಕಾರ್ಯಕ್ರಮ



ಹಿರಿಯ ಸಹಕಾರಿಗಳ ಅನೌಪಚಾರಿಕ ಸಮಾಲೋಚನೆ